

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

**SIHI KAHI**

KANNADA DAILY MORNING
BAGALKOT



**ಸಂಪಾದಕರು : ಮಾರುತಿ ಹೊಸಮನಿ**

**Editor : MARUTI BASAVANTAPPA HOSAMANI**

**Cell : +91 97413 19119**



Volume : 06 | Issue : 212 | Wednesday 10-01-2024 | E-mail : maruti.b.hosamani76@gmail.com | Page: 4 | Price : Rs. 1/-


## ಹೆಲ್ಮೆಟ್ ಧರಿಸಿ ಬರುವ ಸವಾರರಿಗೆ ಗುಲಾಬಿ ನೀಡಿ ಪಿಎಸ್ಐ ಚೆನ್ನಯ್ಯ ದೇವೂರ




ಹುನಗುಂದ : ರಾಜ್ಯಾದ್ಯಂತ ದ್ವಿ ಚಕ್ರ ವಾಹನಗಳ ಅಪಘಾತ ಹೆಚ್ಚುತ್ತಿರುವ ಹಿನ್ನಲ್ಲೆಯಲ್ಲಿ ರಾಜ್ಯ ಸರ್ಕಾರ ನ.25 ರಂದು ಹೆಲ್ಮೆಟ್ ಕಡ್ಡಾಯ ಮಾಡಿದ್ದ ಬೆನ್ನಲೆಯೇ ಪೊಲೀಸ್ ಇಲಾಖೆ ಅದನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವ ಉದ್ದೇಶದಿಂದ ಸೋಮವಾರ ಪಿಎಸ್ಐ ಚನ್ನಯ್ಯ ದೇವೂರ ಅವರು ಹೆಲ್ಮೆಟ್ ಧರಿಸಿದ ದ್ವಿ ಚಕ್ರ ವಾಹನ ಸವಾರ ತಡೆದು ಗುಲಾಬಿ ನೀಡಿ ಸ್ವಾಗತಿಸುವ ಮೂಲಕ ಅಮೂಲ್ಯವಾದ ಜೀವವನ್ನು ರಕ್ಷಿಸಿ ಕೊಳ್ಳಲು ಹೆಲ್ಮೆಟ್ ಕಡ್ಡಾಯವಾಗಿ ಧರಿಸಲು ಸೂಚಿಸಿದರು.

ಅಮರಾವತಿ ಕ್ರಾಸ್ದಲ್ಲಿ ಜಿಲ್ಲಾ ಪೊಲಿಸ್ ಆದೇಶದ ಹಿನ್ನೆಲೆಯಲ್ಲಿ ಹೆಲ್ಮೆಟ್ ಕಡ್ಡಾಯ ಅಭಿಯಾನ ನಡೆಸಿ ಹೆಲ್ಮೆಟ್ ಧರಿಸಿ ಬರುವ ಬೈಕ್ ಸವಾರರಿಗೆ ಗುಲಾಬಿ ನೀಡಿದರೇ ಹೆಲ್ಮೆಟ್ ಇಲ್ಲದೇ ಬರುವ ದ್ವಿ ಚಕ್ರ ವಾಹನ ಸವಾರರಿಗೆ ಇತ್ತೀಚಿಗೆ ಮೋಟರ್ ಸೈಕಲ್ ಅಪಘಾತದಲ್ಲಿ ಮೃತಪಟ್ಟ ಜನರಲ್ಲಿ ಹೆಚ್ಚಿನ ಜನರು ತಲೆಗೆ ಪೆಟ್ಟು ಬಿದ್ದು ಸಾವನ್ನಪ್ಪುತ್ತಿದ್ದು.ಹೆಲ್ಮೆಟ್ ಧರಿಸುವುದರಿಂದ ಇಂತಹ ಸಾವು ನೋವುಗಳನ್ನು ತಡೆಯುಲು ಸಾಧ್ಯ.ನಿಮ್ಮ ಸುರಕ್ಷತೆಯ ಸಂಚಾರಕ್ಕೆ ವಾಹನ ಸವಾರ ಮತ್ತು ಹಿಂಬದಿಯ ಸವಾರರು ಕಡ್ಡಾಯುವಾಗಿ ಹೆಲ್ಮೆಟ್ ಧರಿಸಿ ಎಂದು ಸವಾರರಿಗೆ ಜಾಗೃತಿಯ ಜೊತೆಗೆ ನಿಯಮವನ್ನು ಪಾಲಿಸದಿದ್ದರೇ ಅಂತವರ ದಂಡ ವಿಧಿಸುವ ಮೂಲಕ ಕಾನೂನು ಪ್ರಕಾರ ಪ್ರಕರಣವನ್ನು ದಾಖಲಿಸಲಾಗುವುದು ಎಂದು ಎಚ್ಚರಿಕೆಯನ್ನು ನೀಡಿದರು.

ಅದರ ಜೊತೆಗೆ ಸಾರ್ವಜನಿಕರು ತಾವು ಇರುವ ಸ್ಥಳದ ಸುತ್ತ ಮುತ್ತಲಿನಲ್ಲಿ ಅಪಘಾತ,ಜಗಳ,ದಾಂಧಲೆ,ಇನ್ನಿತರ ಅಪರಾಧ ತನದ ಘಟನೆಗಳು ಜರುಗಿದರೆ ತಕ್ಷಣವೇ 112 ಇಆರ್ಎಸ್ಎಸ್ ವಾಹನಕ್ಕೆ ಕರೆ ಮಾಡಿ ತಕ್ಷಣ ಪರಿಹಾರ ಕಾಣಬಹುದು ಎಂದರು.

ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಸಿದ್ದು ಕೌಲಗಿ,ರಮೇಶ ಹೊಸಮನಿ, ಮೌನೇಶ ಪತ್ತಾರ ಸೇರಿದ್ದಂತೆ ಅನೇಕರು ಇದ್ದರು.

**ತಾಲೂಕ ವರದಿಗಾರರು: ಮಲ್ಲಿಕಾರ್ಜುನ.ಎಂ.ಬಂಡರಗಲ್ಲ**

## ಸಿಂದಗಿ ಜಿಲ್ಲೆಯನ್ನಾಗಿ ಮಾಡುವಂತೆ ಆಗ್ರಹಿಸಿ ವಿವಿಧ ಮಹಿಳಾ ಸಂಘಟನೆಗಳ ಪದಾಧಿಕಾರಿಗಳು ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು



ಸಿಂದಗಿ : ವಿಜಯಪುರ ಜಿಲ್ಲೆಯನ್ನು ವಿಭಜನೆ ಮಾಡಿ ಹೊಸ ಜಿಲ್ಲೆ ಸೃಷ್ಟಿ ಮಾಡುವುದಾದರೆ ಸಿಂದಗಿ ತಾಲೂಕನ್ನು ಜಿಲ್ಲಾ ಕೇಂದ್ರವನ್ನಾಗಿ ಮಾರ್ಪಡಿಸಲು ವಿವಿಧ ಮಹಿಳಾ ಸಂಘಟನೆಯ ಪದಾಧಿಕಾರಿಗಳು ತಹಶೀಲ್ದಾರ ಪ್ರದೀಪ ಕುಮಾರ ಹಿರೇಮಠ ಅವರ ಮೂಲಕ ಇಂಡಿ ಉಪ ವಿಭಾಗಾಧಿಕಾರಿಯವರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಯುವ ಕುರುಬ ಸಂಘದ ರಾಜ್ಯಾಧ್ಯಕ್ಷೆ ಶಿಲ್ಪಾ ಕುದರಗೊಂಡ, ಸಾಧನಾ ಸಂಘಟನೆಯ ಅನಸುಭಾಯಿ ಪರಗೊಂಡ, ಜನಜಾಗೃತಿ ಸಂಘಟನೆಯ ನೀಲಮ್ಮ ಯಡ್ರಾಮಿ, ಶ್ಯಾಮಲಾ ಮಂದೇವಾಲ್, ಅನುಸುಬಾಯಿ ಮೇಲಿನಮನಿ, ಗೌಸಿಯಾ ಶೇಖ, ಜಯಶ್ರೀ ನಾಟೀಕಾರ, ಲಕ್ಷ್ಮಿ ಕಲಾಲ, ಯಮುನಾಬಾಯಿ ಮಾದರ, ಅನ್ನಪೂರ್ಣ ದೇವಕರ ಸೇರಿದಂತೆ ಅನೇಕರು ಮಾತನಾಡಿ, ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕು ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಭೌಗೋಳಿಕವಾಗಿ ಜನಸಂಖ್ಯೆಯನ್ನು ಹೊಂದಿದ್ದು ವಿಸ್ತೀರ್ಣದಲ್ಲಿಯೂ ದೊಡ್ಡದಾಗಿದೆ. ಸಿಂದಗಿಯು ಕೇಂದ್ರಸ್ಥಾನದಲ್ಲಿದ್ದು, ತಾಲೂಕಿನ ಸುತ್ತ ಮುತ್ತಲಿನಲ್ಲಿ ಕಲಬುರ್ಗಿ, ಯಾದಗಿರಿ, ರಾಯಚೂರ ಮತ್ತು ವಿಜಯಪುರ ಜಿಲ್ಲೆಗಳ ಹೆಚ್ಚಿನ ಸಂಪರ್ಕವನ್ನು ಹೊಂದಿದೆ. ಮತ್ತು ಕಂದಾಯ ಇಲಾಖೆಯಲ್ಲಿ ಅತೀ ಹೆಚ್ಚಿನ ಆದಾಯವನ್ನು ಸಿಂದಗಿ ತಾಲೂಕಿನಿಂದ ಸಂಗ್ರಹವಾಗುತ್ತಿದ್ದು ವ್ಯವಸ್ಥಿತ ನಗರ ವ್ಯವಸ್ಥೆಯನ್ನು ಹೊಂದಿದೆ. ಹಲವಾರು ಶಿಕ್ಷಣ ಸಂಸ್ಥೆಗಳು ಉತ್ತಮ ಭೋದನೆ ಮಾಡುವದರೊಂದಿಗೆ ರಾಜ್ಯದಲ್ಲಿ ಹೆಸರು ವಾಸಿಯಾಗಿ ಶೈಕ್ಷಣಿಕ ಕಾಶಿ ಎಂದನೆಸಿ ಕೊಂಡಿದೆ. ಹಾಗೂ ದಿನದ 24.ಗಂಟೆಯು ಉತ್ತಮ ಸಾರಿಗೆ ಸಂಪರ್ಕ ವ್ಯವಸ್ಥೆ ಇದ್ದು, ಮುಂಬೈ, ಚೆನ್ನೈ ವಾಣಿಜ್ಯ ಕಾರಿಡಾರ ಛತುಸ್ಪೋನ ರಸ್ತೆ ಸಿಂದಗಿ ನಗರಕ್ಕೆ ಹೊಂದಿ ಕೊಂಡಿರುವುದು ಮತ್ತೊಂದು ಹೆಮ್ಮೆಯ ವಿಷಯವಾಗಿದೆ. ಅದರಂತೆ ರಾಷ್ಟ್ರೀಯ ಹೆದ್ದಾರಿ 50. ಸಿಂದಗಿ ನಗರ ದೊಂದಿಗೆ ಸಂಪರ್ಕ ಬೆಸೆದಿದ್ದು ಸಾರಿಗೆ ಸಂಪರ್ಕಕ್ಕೆ ಉತ್ತಮ ನಿದರ್ಶನವಾಗಿದೆ. ಶೇಡಬಾಳ ದಿಂದ ಶಾಹಾಬಾದ ರೇಲ್ವೆ ಮಾರ್ಗವು ಮುಂಬರುವ ದಿನ ಮಾನಗಳಲ್ಲಿ ನೂತನ ರೇಲ್ವೇ ಮಾರ್ಗ ಸೃಷ್ಠಿಯಾಗುವ ಲಕ್ಷಣಗಳಿದ್ದು, ಸುತ್ತ–ಮುತ್ತಲಿನ ಎಲ್ಲಾ ತಾಲೂಕಾಗಳಿಗೆ 20–40ಕಿಮೀ ವ್ಯಾಪ್ತಿಯನ್ನು ಹೊಂದಿದೆ. ಇದರಿಂದ ಇಂಡಿ ಜಿಲ್ಲೆಯನ್ನು ಮಾಡದೇ ಸಿಂದಗಿ ಜಿಲ್ಲಾ ಕೇಂದ್ರವೆಂದು ಪರಿಗಣಿಸಿ ಈ ಭಾಗದ ಜನರ ಬಹುದಿನದ ಬೇಡಿಕೆಯಾದ ಸಿಂದಗಿ, ಆಲಮೇಲ, ದೇವರಹಿಪ್ಪರಗಿ, ತಾಳಿಕೋಟಿ ಈ ತಾಲೂಕುಗಳನ್ನು ಗಮನದಲ್ಲಿಟ್ಟು ಕೊಂಡು ಮತ್ತು ಸಾಧ್ಯವಾದರೇ ಇಂಡಿ ಮತ್ತು ಚಡಚಣ ತಾಲೂಕುಗಳನ್ನು ಸಿಂದಗಿ ಜಿಲ್ಲಾ ಕೇಂದ್ರಕ್ಕೆ ಸೇರಿಸಿ ಹೊಸ ಜಿಲ್ಲೆ ಸೃಷ್ಟಿ ಮಾಡಬೇಕು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟು ಕೊಂಡು ಸೂಕ್ತ ತೀರ್ಮಾನವನ್ನು ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡರು.

**ಜಿಲ್ಲಾ ವರದಿಗಾರರು: ಶಿವಪ್ಪ.ಬಿ.ಹರಿಜನ.ಇಂಡಿ**

## ರಾಜ್ಯ ಸರ್ಕಾರ ಹಿಂದೂ ಕಾರ್ಯಕರ್ತರ ಮೇಲೆ ನಡೆಸುತ್ತಿರುವ ದೌರ್ಜನ್ಯ ವಿರುದ್ಧ ಪ್ರತಿಭಟನೆ

ಅಥಣಿ : ಕರ್ನಾಟಕ ರಾಜ್ಯ ಸರ್ಕಾರ ಅಸ್ತಿತ್ವಕ್ಕೆ ಬಂದ 6 ತಿಂಗಳಿನಿಂದ ಹಿಂದೂ ಸಂಘಟನೆಗಳು ಹಾಗೂ ಹಿಂದೂ ಕಾರ್ಯ ಕರ್ತರ ಮೇಲೆ ಕಿರುಕುಳ.ಸುಳ್ಳು ಮೊಕದ್ದಮೆ. ಜೈಲ್ ವಾಸ ನಿರಂತರ ನಡೆಯುತ್ತಿದೆ. ಪೊಲೀಸ್ ಇಲಾಖೆ ದುರ್ಬಳಕೆ ಮಾಡಿಕೊಂಡು ದ್ವೇಷದ ರಾಜಕೀಯ ಮಾಡುತ್ತಿದೆ. ಕೆಲವು ಘಟನೆಗಳು ತಮ್ಮ ಗಮನಕ್ಕೆ ತರ ಬಯಸುತ್ತೇವೆ.

ದೊಡ್ಡ ಬಳ್ಳಾಪುರದಲ್ಲಿ ಅಕ್ರಮವಾಗಿ 35 ಟನ್ ಗೋಮಾಂಸ ವಾಹನ ಹಿಡಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಅಧ್ಯಕ್ಷ ಶ್ರೀ ರಮೇಶಗೌಡ, ಬೆಂಗಳೂರು ಮಹಾ ನಗರ ಪ್ರಧಾನ ಕಾರ್ಯದರ್ಶಿ ಸೇರಿದಂತೆ 16 ಗೋ ರಕ್ಷಕರಿಗೆ 48 ದಿವಸ ಜೈಲ್! ಹಿಂಸೆ. ಧಮ್ಕಿ.ಶ್ರೀರಾಮ ಸೇನಾ ರಾಷ್ಟ್ರೀಯ ಅಧ್ಯಕ್ಷ ಶ್ರೀ ಪ್ರಮೋದ ಮುತಾಲಿಕರಿಗೆ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲಾ ಪ್ರವೇಶ ನಿರ್ಬಂಧ.ಹುಬ್ಬಳ್ಳಿಯಲ್ಲಿ ಕೇಸ್ ದಾಖಲು.

ಶ್ರೀರಾಮ ಸೇನಾ ರಾಜ್ಯ ಅಧ್ಯಕ್ಷ ಶ್ರೀ ಗಂಗಾಧರ ಕುಲಕರ್ಣಿಯವರಿಗೆ ಚಿಕ್ಕಮಗಳೂರು ಜಿಲ್ಲೆ ಪ್ರವೇಶ ನಿರ್ಬಂಧ.

ರಾಮನಗರ ಜಿಲ್ಲೆಯಲ್ಲಿ ಅಕ್ರಮ ಗೋ ಸಾಗಾಣಿಕೆ ತಡೆದದ್ದಕ್ಕೆ 4 ಜನರ ಮೇಲೆ ಕೇಸ್ ದಾಖಲು. ವಿಜಯಪುರ ಜಿಲ್ಲೆಯಲ್ಲಿ ದೇವಿ ವಿಗ್ರಹದ ಮೇಲೆ ಮುಸ್ಲಿಮ್ ನಿಂದ ಮಲ–ಮೂತ್ರ ವಿಸರ್ಜನೆ. ಗಂಗಾವತಿಯಲ್ಲಿ ಗಣಪತಿ ವಿಸರ್ಜನೆ ಸಂದರ್ಭದಲ್ಲಿ ಮಸೀದೆಗೆ ಆರತಿ ಮಾಡಿದ್ರು ಅಂತ ಕೇಸ್ ದಾಖಲು. ಚಿಕ್ಕಮಗಳೂರಿನಲ್ಲಿ 14 ಹಿಂದೂ ಕಾರ್ಯಕರ್ತರ 7 ವರ್ಷ ಹಳೆಯ ಕೇಸ್ ಮತ್ತೆ ಪ್ರಾರಂಭ. ಇವು ಉದಾಹರಣೆಗೆ ಮಾತ್ರ. ಇನ್ನೂ ನಿರಂತರವಾಗಿ ನಡೆದಿವೆ, ನಡೆಯುತ್ತಿವೆ.ಇನ್ನೂ ಹಲವಾರು ಅಹಿತಕರ ಹಿಂದೂ ವಿರೋಧಿ ದುರ್ಘಟನೆಗಳು ನಡೆಯುತ್ತಲೇ ಇದ್ದಾವೆ. ಇಡೀ ರಾಜ್ಯದಲ್ಲಿ ಹಿಂದೂಗಳು ಇಂತಹ ಸ್ಥಿತಿಯಲ್ಲಿ ಬದುಕುತ್ತಿದ್ದು ರೊಚ್ಚಿಗೆದ್ದು ರಸ್ತೆ ಗಿಳಿಯುವ ಮೊದಲು ತಾವು ರಾಜ್ಯ ಸರ್ಕಾರಕ್ಕೆ ಹಿಂದೂ ವಿರೋಧಿ ನಡೆಯನ್ನು ತಕ್ಷಣವೇ ನಿಲ್ಲಿಸಲು ಆದೇಶಿಸಬೇಕು ಎಂದು ಪತ್ರಿಕಾ ಪ್ರಕಟಣೆ ಮೂಲಕ ಆಗ್ರಹಿಸುತ್ತೇವೆ.

**ಜಿಲ್ಲಾ ವರದಿಗಾರರು : ಎಂ. ಎಂ. ಶರ್ಮಾ ಬೆಳಗಾವಿ**

## ಇ–ಕಲ್ಯಾಣ ತಂತ್ರಾಂಶ ಸಮರ್ಪಕ ಬಳಕೆಯಾಗಲಿ

ಬಾಗಲಕೋಟೆ : ಜಿಲ್ಲೆಯಲ್ಲಿ ಸಮಗ್ರ ಗರ್ಭಪಾತ ಸೇವೆಗಳ ಅಡಿಯಲ್ಲಿ ಸೇವಾ ಸೌಲಭ್ಯವನ್ನು ಒದಗಿಸುವ ಖಾಸಗಿ ಮತ್ತು ಸರಕಾರಿ ಆಸ್ಪತ್ರೆಗಳನ್ನು ಇ–ಕಲ್ಯಾಣಿ ತಂತ್ರಾಂಶದ ಮುಖಾಂತರ ನೊಂದಣಿ ಮಾಡಲು ಗರ್ಭಪಾತ ಸೇವೆಗಳ ಗಣಕೀಕೃತಗೊಳಿಸಲು ಕಾರ್ಯಕ್ರಮ ಕೈಪಿಡಿ, ಮಾರ್ಗಸೂಚಿ, ಕಾಯ್ದೆಗಳು ದಾಖಲಾತಿ ಪುಸ್ತಕಗಳು ಮತ್ತು ನಮೂನೆಗಳ ತಂತ್ರಾಂಶದಲ್ಲಿ ಅಡಕಗೊಳಿಸಿ, ಸಮಗ್ರ ಗರ್ಭಪಾತ ಸೇವೆಗಳ ಬಗ್ಗೆ ಮಾಹಿತಿ ಮತ್ತು ಗರ್ಭಪಾತ ಸೇವೆಗಳನ್ನು ಒದಗಿಸುವ ಆಸ್ಪತ್ರೆಗಳು ಇ–ಕಲ್ಯಾಣ ತಂತ್ರಾಂಶದ ಮೂಲಕ ಅಳವಡಿಸಲು ಆದೇಶಿಸಲಾಗಿದೆ.

ಈ ಹಿನ್ನಲೆಯಲಿ ಈಗಾಗಲೇ ನೋಂದಾಯಿಸಲಾಗಿರುವ ಗರ್ಭಪಾತ ಸೇವೆಗಳನ್ನು ಒದಗಿಸುವ ಖಾಸಗಿ ಹಾಗೂ ಸರ್ಕಾರಿ ಆಸ್ಪತ್ರೆಗಳನ್ನು ತಂತ್ರಾಂಶದಲ್ಲಿ ನಮೂದಿಸಬೇಕು. ಸಮಗ್ರ ಗರ್ಭಪಾತ ಸೇವೆಗಳ ಕಾರ್ಯಕ್ರಮವನ್ನು ಬಲಪಡಿಸಲು ಹಾಗೂ ಗರ್ಭಪಾತದಿಂದಾಗುವ ತೊಡಕುಗಳು ಮತ್ತು ತಾಯಿ ಮತ್ತು ಮಕ್ಕಳ ಮರಣ ಕಡಿಮೆಗೊಳಿಸಲು ಇ–ಕಲ್ಯಾಣಿ ತಂತ್ರಾಂಶ ಬಳಕೆಯನ್ನು ಎಲ್ಲ ಖಾಸಗಿ ಆಸ್ಪತ್ರೆಗಳು ಹಾಗೂ ಸರ್ಕಾರಿ ಆಸ್ಪತ್ರೆಗಳು ಕಡ್ಡಾಯವಾಗಿ ಅನುಷ್ಠಾನವಾಗುವಂತೆ ಸೂಚಿಸಿದೆ. ತಪ್ಪಿದಲ್ಲಿ ಮೆಡಿಕಲ್ ಟರ್ಮಿನಲ್ ಪ್ರೆಗ್ನೆನ್ಸಿ ಆಕ್ಟ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಾವಿತ್ರಿ ಹೆಳವರ (8660897358), ವಿಠಲ ಸರೋದೆ (9886980092) ಇವರನ್ನು ಸಂಪರ್ಕಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಾಜಕುಮಾರ ಯರಗಲ್ಲ ಹಾಗೂ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಡಿ.ಬಿ.ಪಟ್ಟಣಶೆಟ್ಟಿ ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ದಿ.20 ರಂದು ಜವಾಹರ ನವೋದಯ ಪರೀಕ್ಷೆ

ಬಾಗಲಕೋಟೆ : 2024–25ನೇ ಸಾಲಿನ ಜವಾಹರ ನವೋದಯ ವಿದ್ಯಾಲಯ 6ನೇ ತರಗತಿ ಪ್ರವೇಶ ಪರೀಕ್ಷೆಯು ಇದೇ ಜನವರಿ 20 ರಂದು ಜಿಲ್ಲೆಯ ಎಲ್ಲಾ 32 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳಲ್ಲಿ ಜರುಗಲಿವೆ. ಅರ್ಜಿ ಸಲ್ಲಿಸಿದ ಎಲ್ಲ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು http://www.navodaya.gov.in ಅಥವಾ http://cbseitms.nic.in ವೆಬ್‌ಸೈಟ್ ಮೂಲಕ ಪಡೆಯಬೇಕು. ಅಭ್ಯರ್ಥಿಗಳು ಪ್ರವೇಶ ಪತ್ರದೊಂದಿಗೆ ಬೆಳಿಗ್ಗೆ 10 ಗಂಟೆಯ ಮೊದಲು ಪರೀಕ್ಷಾ ಕೇಂದ್ರಕ್ಕೆ ಉಪಸ್ಥಿತರಿರಬೇಕು ಎಂದು ಚಿರ್ಲಕೊಪ್ಪ ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಾಲು ಉತ್ಪಾದಕರ ಸಂಘ: 11 ಅಭ್ಯರ್ಥಿಗಳ ಗೆಲುವು

ಮಹಾಲಿಂಗಪುರ: ಸಮೀಪದ ನಾಗರಾಳ ಗ್ರಾಮದಲ್ಲಿ ನಡೆದ ನಾಗರಾಳ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ ಸದಸ್ಯರ ಚುನಾವಣೆಯಲ್ಲಿ ವಿವಿಧ 4 ಕ್ಷೇತ್ರಗಳಿಗೆ 11 ಅಭ್ಯರ್ಥಿಗಳು ಗೆಲುವು ಸಾಧಿಸಿದರು. ಅಪ್ಪಯ್ಯಪ್ಪ ಅಡಿವೆಪ್ಪ ಲದ್ದಿ, ಈರಪ್ಪ ಗುರಪ್ಪ ಅಡಕಿ, ಈರಪ್ಪ ಸಿದ್ದಪ್ಪ ಸುತಾರ, ಕುಶಾ ಸಿದ್ದಪ್ಪ ಬಿ.ಪಾಟೀಲ, ಕ್ರಿಷ್ಣಪ್ಪ ರಾಮಪ್ಪ ಅರವಳ್ಳಿ, ಬಸಪ್ಪ ವೆಂಕಪ್ಪ ಬಿ.ಪಾಟೀಲ, ಬಾಲಪ್ಪ ಭೀಮಶಿ ಬಿ.ಪಾಟೀಲ, ಸದಾಶಿವ ಸಿದ್ದಪ್ಪ ಒಡೆಯರ, ಹಣಮಂತಗೌಡ ಶ್ರೀಮಂತಗೌಡ ನ್ಯಾಮಗೌಡ್ರ, ರುಕ್ಮವ್ವ ವಿಠ್ಠಲ ಜೈನಾಪುರ, ಸತ್ಯೆವ್ವಾ ಸುಭಾಸ ಲದ್ದಿ ಗೆಲವು ಸಾಧಿಸಿದರು. ಸಿದ್ದಪ್ಪ ಅರ್ಜುನ ಹೊಸಮನಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಚ್.ಕೆ. ದೊಡಸಿನ್ನವರ ತಿಳಿಸಿದರು .ಮುಖ್ಯಕಾರ್ಯನಿರ್ವಾಹಕಿ ಮಂಜುಳಾ ಪಾಟೀಲ ಇದ್ದರು.

## "ಪರಿಸರ ಸ್ನೇಹಿ ಸುಸ್ಥಿರ ಛಾವಣಿಯ ಲೀವಿಂಗ್ ರೂಫ್ಸ್"ಗೆ ಭಾರತೀಯ ಪೇಟೆಂಟ್ ಭಾಜನ



ವಿಜಯಪುರ : ಜಿಲ್ಲೆಯ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿತಾಂತ್ರಿಕ ಹಾಗೂ ಅಭಿಯಾಂತ್ರಿಕ ಮಹಾ ವಿದ್ಯಾಲಯದಲ್ಲಿ ಸಿವಿಲ್ ಇಂಜಿನಿಯರಿಗ್ ವಿಭಾಗದ ಸಹ ಪ್ರಾಧ್ಯಾಪಕಿ ಡಾ.ಅನುರಾಧ ಎಸ್. ಟಂಕಸಾಲಿ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿ ಮನ್ಸುರ ಅಲಿ ದುಂಡಸಿಯು ಅಭಿವೃದ್ಧಿ ಪಡಿಸಿದ ''ಇಂಡಿಯನ್ ಪೇಟೆಂಟ್ ನಂ 489085'' ತಂತ್ರಜ್ಞಾನವು ಪರಿಸರ ಸ್ನೇಹಿ, ಸುಸ್ಥಿರವಾದ ಲೀವಿಂಗ್ ರೂಫ್ಸ್ ಎಂಬುದು ಹಸಿರು ಛಾವಣಿಯ ಪರಿಕಲ್ಪನೆಯೊಂದಿಗೆ ಪೂರಕವಾಗಿದೆ. ಇದು ಕಟ್ಟಡದ ಕೋಣೆಯ ಉಷ್ಣಾಂಶವನ್ನು ಕಡಿಮೆ ಮಾಡುತ್ತದಲ್ಲದೆ ಮತ್ತು ಕಟ್ಟಡಗಳ ಸೌಂದರ್ಯದ ಸೌಬಗನ್ನು ಹೆಚ್ಚಿಸುತ್ತದೆ.

ಈ ಪೆಟೆಂಟ್‌ಗೆ ಬಿ.ಎಲ್.ಡಿ.ಇ ಸಂಸ್ಥೆಯ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿತಾಂತ್ರಿಕ ಕಾಲೇಜಿನ ಮೊದಲ ಸಾಂಸ್ಥಿಕ ಪೇಟೆಂಟ್ ಆಗಿದ್ದು ಮತ್ತು ಸಿವಿಲ್ ವಿಭಾಗದಿಂದ ಪಡೆದ ಮೊದಲ ಪೇಟೆಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಭಾರತೀಯ ಪೆಟೆಂಟ್ ಪಡೆಯುವಲ್ಲಿ ಯಶಸ್ವಿಯಾದ ಡಾ. ಅನುರಾಧ ಎಸ್. ಟಂಕಸಾಲಿ ಮತ್ತು ವಿದ್ಯಾರ್ಥಿ ಮನ್ಸುರ ಅಲಿ ದುಂಡಸಿ ಅವರ ಪರಿಶ್ರಮ ಮತ್ತು ಸಾಧನೆಗೆ ಬಿ.ಎಲ್.ಡಿ.ಇ ಸಂಸ್ಥೆಯ ಆಡಳಿತ ಮಂಡಳಿ, ಕಾಲೇಜಿನ ಪ್ರಾಚಾರ್ಯ .ವಿ.ಜಿ.ಸಂಗಮ, ವಿಭಾಗದ ಮುಖ್ಯಸ್ಥರು ಹಾಗೂ ಶಿಕ್ಷಕ ವರ್ಗದವರು ಶುಭ ಹಾರೈಸಿದ್ದಾರೆ.

## ಡಿ.ಎಸ್.ಎಸ್ ತಾಲೂಕ ಪದಾಧಿಕಾರಿಗಳ ಆಯ್ಕೆ



ಕಲಬುರ್ಗಿ : ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮಹಾತ್ಮಾ ಪ್ರೊಟಟ ಬಿ. ಕೃಷ್ಣಪ್ಪ ಸ್ಥಾಪಿತ ಜಿಲ್ಲಾ ಸಂಚಾಲಕರಾದ ಭೀಮಾಶಂಕರ.ಎಂ.ಕದಂ ರವರ ಅಧ್ಯಕ್ಷತೆ ತಾಲೂಕ ಮಟ್ಟದ ಸಭೆ ಜರುಗಿತು.

ಸಭೆಯಲ್ಲಿ ಜಿಲ್ಲಾ ಸಂಘಟನಾ ಸಂಚಾಲಕರಾದ. ಸಚಿನ್. ಎಂ. ದೊಡ್ಡಮನಿ, ಜಿಲ್ಲಾ ಖಜಾಂಚಿರಾದ ಶ್ರೀ. ಸಾತಪ್ಪ. ಆರ್. ತೆಗನೂರ್ ರವರ ಮತ್ತು ಕಲಬುರಗಿ ತಾಲೂಕಿನ ಸರ್ವ ಸದ್ಯಸರು ಹಾಗೂ ಕಾರ್ಯಕರ್ತರು ಉಪಸ್ಥಿತಿಯಲಿ ಸರ್ವಾನು ಮತದಿಂದ ಕೆಳಕಂಡಂತೆ ಕಲಬುರಗಿ ತಾಲೂಕಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ವಿಘ್ನಶ್ . ಎನ್.ಶ್ರೀಮಕರ್ ತಾಲೂಕ ಸಂಚಾಲಕರು. ಆಕಾಶ.ಬಿ.ಕೊಳ್ಳಿ ತಾಲೂಕ ಸಂಘಟನಾ ಸಂಚಾಲಕರು ಅಲ್ಲಾ. ಪಟೇಲ್. ವಾಡಿ ತಾಲೂಕ ಸಂಘಟನಾ. ಸಂಚಾಲಕರು ಸಾಯಿಬಾಣ್ಣ.ಎ.ಮಾಡ್ಡಿಕರ್. ತಾಲೂಕ ಸಂಘಟನಾ ಸಂಚಾಲಕರು ಸುನಿಲ.ಜೆ.ಕೆ. ತಾಲೂಕ ಸಂಘಟನಾ ಸಂಚಾಲಕರು ಧನರಾಜ.ಪಿ.ದೇವನೂರ್ ತಾಲೂಕ. ಸಂಘಟನಾ. ಸಂಚಾಲಕರು ಓಂರಾಜ.ಎಂ.ಪಂಚ ತಾಲೂಕ. ಸಂಘಟನಾ. ಸಂಚಾಲಕರು ಪ್ರಭಾಕರ. ಎ.ಬೊಮ್ಮನಳ್ಳಿ. ತಾಲೂಕ. ಸಂಘಟನಾ. ಸಂಚಾಲಕರು ಸಹದೇವ.ಎಂ.ದೊಡ್ಡಮನಿ. ತಾಲೂಕ. ಖಜಾಂಚಿ ಕಲಬುರಗಿ ಈ ಎಲ್ಲಾ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಪ್ರಸ್ತುತ ಸಭೆಯಲ್ಲಿ ರಾಜ್ಯ ಸಂಘಟನಾ ಸಂಚಾಲಕರು ಉಪಸ್ಥಿತರಿದ್ದು ಸಂಘಟನೆ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರು. ತಾಲೂಕಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡವುದರೊಂದಿಗೆ ತಾಲೂಕಿನಲ್ಲಿ ದಲಿತರ ಮೇಲೆ ದೌರ್ಜನ್ಯ, ಹಾಗೂ ಮಹಿಳೆಯರ ಮೇಲೆ ಅನ್ಯಾಯ ಅತ್ಯಾಚಾರಗಳ ವಿರುದ್ಧ ಹೋರಾಟ ಮಾಡುವುದರ ಮುಖಾಂತರ ನ್ಯಾಯ ದೊರಕಿಸಿ ಕೊಡಲು ಇಂದಿನಿಂದಲೇ ತಾವು ಜವಾಬ್ದಾರಿ ತೆಗೆದು ಕೊಂಡು ನಿರಂತರವಾಗಿ ಸಂಘಟನೆಯಲ್ಲಿ ಕಾರ್ಯನಿರ್ವಾಹಿಸಿ ನ್ಯಾಯ ಒದಗಿಸಿ ಕೊಡಬೇಕೆಂದು ಈ ಮೂಲಕ ಜಿಲ್ಲಾ ಸಂಚಾಲಕರಾದ ಭೀಮಾಶಂಕರ್.ಎಂ.ಕದಂ ರವರು ಪತ್ರಿಕಾ ಪ್ರಕಟಣೆಗೆ ತಿಳಿಸಿರುತ್ತಾರೆ.

**ತಾಲೂಕ ವರದಿಗಾರರು : ಸಚಿನ್. ಎಂ. ದೊಡ್ಡಮನಿ ಕಲಬುರಗಿ**

## ಬೊಂಬೆ ಆಟಿಕೆ ಆಧಾರಿತ ಪಾಠೋಪಕರಣಗಳ ಪ್ರದರ್ಶನ: ಜಿಲ್ಲಾ ಮಟ್ಟಕ್ಕೆ ಆಯ್ಕೆ



ಬೈಲಹೊಂಗಲ : ಜೀವನದಲ್ಲಿ ಕೇವಲ ಶಿಕ್ಷಣದಿಂದ ಮಾತ್ರ ಬದುಕು ಕಟ್ಟಿಕೊಳ್ಳುವದು ಸಾಧ್ಯವಿಲ್ಲ. ಈಗಾಗಿ ಮಕ್ಕಳನ್ನು ಪ್ರತಿಭಾವಂತರನ್ನಾಗಿ ರೂಪಿಸುವದರ ಜೊತೆಗೆ ಶಿಕ್ಷಕರಲ್ಲಿ ಹುಮ್ಮಸ್ಸು ತುಂಬಲು ಬೊಂಬೆ ಆಟಿಕೆ ಆಧಾರಿತ ಪಾಠೋಪಕರಣಗಳ ಪ್ರದರ್ಶನ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಗತ್ಯವಾಗಿದ್ದು ಪ್ರತಿ ಶಿಕ್ಷಕರು ಇಂತಹ ಮಹತ್ವದ ಕಾರ್ಯಗಳಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕೆಂದು ಬೆಳಗಾವಿಯ ಡಯಟ್‌ನ ಹಿರಿಯ ಉಪನ್ಯಾಸಕಿ ಎಂ.ಬಿ. ದಾಸೋಗ ಹೇಳಿದರು.

ಅವರು ತಾಲೂಕಿನ ಸಾಣಿಕೊಪ್ಪ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆಯ ಆವರಣದಲ್ಲಿ ಈಚೆಗೆ ನಡೆದ ತಾಲೂಕಾ ಹಂತದ ಬೊಂಬೆ ಆಟಿಕೆ ಆಧಾರಿತ ಪಾಠೋಪಕರಣಗಳ ಪ್ರದರ್ಶನ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳನ್ನು ಸತ್ಪ್ರಜೆಗಳನ್ನಾಗಿ ರೂಪಿಸಲು ಶಿಕ್ಷಕರಲ್ಲಿ ಕೌಶಲ್ಯತೆ ಇದ್ದರೆ ಮಾತ್ರ ಉತ್ತಮ ರಾಷ್ಟ್ರಕ್ಕೆ ಅಡಿಪಾಯ ಹಾಕಲು ಸಾಧ್ಯವಾಗಲಿದೆ. ಈಗಾಗಿ ಪಾಠೋಪಕರಣಗಳ ಸ್ಪರ್ಧೆಗಳಲ್ಲಿ ಭಾಗವಹಿಸಿ ಶಿಕ್ಷಕರು ತಮ್ಮ ಕೀರ್ತಿ ಹೆಚ್ಚಿಸಿಕೊಳ್ಳಬೇಕೆಂದರು.

ತಾಲೂಕಾ ಬಿಇಓ ಕಚೇರಿಯ ಕ್ಷೇತ್ರ ಸಮನ್ವಯಾಧಿಕಾರಿ ಬಿ.ಎನ್.ಕಸಾಳೆ ಮಾತನಾಡಿ, ಶಿಕ್ಷಕರು ಕೇವಲ ಕಲಿಸುವದಕ್ಕಷ್ಟೇ ಸೀಮೀತವಾಗ ಬಾರದು, ತಮ್ಮಲ್ಲಿರುವ ಪ್ರತಿಭೆಯನ್ನು ಹೊರ ಹಾಕಿ ವಿದ್ಯಾರ್ಥಿಗಳಿಗೆ ಸ್ಪೂರ್ತಿ ತುಂಬಿ ಬದುಕಿನ ಕೌಶಲ್ಯತೆ ಬೆಳೆಸಲು ಮುಂದಾಗಬೇಕು. ಸ್ಪರ್ಧೆಗಳಲ್ಲಿ ಸೋತಾಗ ಕುಗ್ಗದೇ ಪ್ರಯತ್ನ ನಿರಂತರವಿದ್ದಾಗ ಮಾತ್ರ ಯಶ ಕಾಣಲು ಸಾಧ್ಯವಾಗತ್ತದೆ ಎಂದರು.

ಎಸ್‌ಡಿಎಂಸಿ ಉಪಾಧ್ಯಕ್ಷ ತಿರ್ಥಪ್ಪ ಸುಂಕದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಎಸ್‌ಡಿಎಂಸಿ ಅಧ್ಯಕ್ಷ ಸಿದ್ದಯ್ಯ ಹಿರೇಮಠ, ಗ್ರಾ.ಪಂ ಸದಸ್ಯ ನಾಗಪ್ಪ ಸಂಗೊಳ್ಳಿ, ಮಹಾಂತಯ್ಯ ಹಿರೇಮಠ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ಎಸ್.ಡಿ.ಗಂಗಣ್ಣವರ, ಎಸ್.ಸಿ.ಎಸ್.ಟಿ ಅಹಿಂದ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಿ.ಡಿ.ತಮ್ಮಣ್ಣವರ, ಶಿಕ್ಷಣ ಸಂಯೋಜಕ ಪ್ರಕಾಶ ಮಾಸ್ತಿಹೊಳಿ, ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಂ.ವಾಯ್.ತಳವಾರ, ರಾಜ್ಯ ಕೆಎಸ್‌ಜಿ ಪರಿಷತ್ ಸದಸ್ಯ ರಮೇಶ ದೊಡಗೌಡರ, ಎಸ್‌ಡಿಎಂಸಿ ಸದಸ್ಯ ರಾಮಣ್ಣ ದುರ್ಗಣ್ಣವರ, ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಮೀನಾಕ್ಷಿ ಸುತಗಟ್ಟಿ ಮುಂತಾದವರು ವೇದಿಕೆ ಮೇಲಿದ್ದರು. ಎಸ್‌ಡಿಎಂಸಿ ಸದಸ್ಯರು, ಶಾಲಾ ಶಿಕ್ಷಕರು ಪಾಲ್ಗೊಂಡಿದ್ದರು.

ತಾಲೂಕಿನ ಸಿದ್ದಸಮುದ್ರದ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆಯ ಶಿಕ್ಷಕ, ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತರಾದ ಸೋಮಲಿಂಗಪ್ಪ ತಿರಕನ್ನವರ ಅವರ ತಂಡ ರಚಿಸಿದ ಗೊಂಬೆ ಆಧಾರಿತ ಪಾಠೋಪಕರಣಗಳ ಪ್ರದರ್ಶನವು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಯಿತು.

ಶಿಕ್ಷಕ ಅನಂತ ಮರೆನ್ನವರ ಸ್ವಾಗತಿಸಿದರು. ಶಿಕ್ಷಕರಾದ ಎ.ಬಿ.ಅಂಗಡಿ, ಎಂ.ಜಿ.ನಧಾಫ್ ನಿರೂಪಿಸಿದರು. ಶಿಕ್ಷಕ ರವಿ ತುರಮುರಿ ವಂದಿಸಿದರು. ಬೊಂಬೆ ಆಟಿಕೆ ಆಧಾರಿತ ಪಠೋಪಕರಣದಲ್ಲಿ ತಾಲೂಕಾ ಮಟ್ಟಕ್ಕೆ ಆಯ್ಕೆಯಾದ ಪ್ರತಿ ಸ್ಪರ್ಧಾಳುಗಳು ಉತ್ಸಾಹದಿಂದ ಪ್ರದರ್ಶನದಲ್ಲಿ ಭಾಗವಹಿಸಿ ಕಾರ್ಯಕ್ರಮಕ್ಕೆ ಹುಮ್ಮಸು ತಂದರು.

# ಅಲೆಮಾರಿ ಜನಾಂಗದ ಸವಲತ್ತು-ಸೌಲಭ್ಯ ಕುರಿತು ಅರಿವು ಮೂಡಿಸಿ ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿ ಸೂಚನೆ



ವಿಜಯಪುರ : ಅಲೆಮಾರಿ, ಅರೆಅಲೆಮಾರಿ ಜನಾಂಗದವರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳ ಕುರಿತು ಸೂಕ್ತ ಜಾಗೃತಿ ಹಾಗೂ ಅರಿವು ಮೂಡಿಸಿ ಸಮರ್ಪಕವಾಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅಲೆಮಾರಿ-ಅರೆ ಅಲೆಮಾರಿ ಜನಾಂಗಕ್ಕೆ ದೊರೆಯುವ ಸೌಲಭ್ಯಗಳನ್ನು ದೊರಕಿಸಿ ಆರ್ಥಿಕ ಸ್ವಾವಲಂಬನೆಗೆ ಅಧಿಕಾರಿಗಳು ಕ್ರಮ ವಹಿಸಬೇಕು. ಅಲೆಮಾರಿ ಹಾಗೂ ಅರೆ ಅಲೆಮಾರಿ ಜನಾಂಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹ ಧನ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ ಹಾಗೂ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಸೇರಿದಂತೆ ಜನಾಂಗದ ಆರ್ಥಿಕ ಸಬಲತೆಗೆ ಮೂಲಭೂತ ಸೌಕರ್ಯ ಹಾಗೂ ವಸತಿ ಸೌಲಭ್ಯವನ್ನು ಒದಗಿಸಲು ಕ್ರಮ ವಹಿಸುವಂತೆ ಅವರು ಸೂಚನೆ ನೀಡಿದರು.

2022-2023ನೆ ಸಾಲಿನಲ್ಲಿ ಅಲೆಮಾರಿ, ಅರೆಅಲೆಮಾರಿ ಜನಾಂಗದವರಿಗೆ 136 ಮನೆಗಳು ಮಂಜೂರಾಗಿವೆ. ಪ್ರತಿ ತಾಲೂಕಿನಲ್ಲಿ ಅರ್ಜಿ ಆಹ್ವಾನಿ ಅರ್ಹ ಫಲಾನುಭವಿಗಳಿಗೆ ಮನೆ ಮಂಜೂರಾತಿಗೆ ಕ್ರಮ ವಹಿಸಬೇಕು. ಈ ಕುರಿತು ಜನಾಂಗದವರಲ್ಲಿ ಸೂಕ್ತ ತಿಳುವಳಿಕೆ ಮೂಡಿಸಬೇಕು. ಅಲೆಮಾರಿ, ಅರೆ ಅಲೆಮಾರಿ ಜನಾಂಗದವರಿಗೆ ಸಾಂಸ್ಕೃತಿಕ ಚಟುವಟಿಕೆ ಸಮುದಾಯ ಭವನ, ಆಶ್ರಮ ಶಾಲೆ ಮತ್ತು ದೇವಸ್ಥಾನ ನಿರ್ಮಾಣ ಮಾಡಿ ಜನಾಂಗಕ್ಕೆ ಸಹಾಯ ಒದಗಿಸುವ ಕುರಿತು ಕ್ರಮ ಕೈಗೊಳ್ಳುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಉಪ ನಿರ್ದೇಶಕರಿಗೆ ಸೂಚಿಸಲಾಯಿತು.

ಅಲೆಮಾರಿ ಜನಾಂಗದವರು ಯಾವುದೇ ಕಾರಣಕ್ಕೂ ಶಿಕ್ಷಣದಿಂದ ವಂಚಿತರಾಗಬಾರದು. ಸರ್ಕಾರದ ಸ್ವಯಂ ಉದ್ಯೋಗ ಸಾಲ, ಗುಂಪುಸಾಲ, ಹಾಗೂ ಆರೋಗ್ಯ ಕಾರ್ಡ, ಹಾಗೂ ಪ್ರೋತ್ಸಹಧನದಂತಹ ಸೌಲಭ್ಯಗಳನ್ನು ಆ ಸಮುದಾಯಗಳಿಗೆ ಒದಗಿಸಬೇಕು. ಅಂಗನವಾಡಿಗಳಲ್ಲಿ ಹಾಗೂ ಶಾಲೆಗಳಲ್ಲಿರುವ ಅಲೆಮಾರಿ ಜನಾಂಗದ ಮಕ್ಕಳ ಮಾಹಿತಿ ಪಡೆದು, ಅಲೆಮಾರಿ ಜನಾಂಗಕ್ಕೆ ಸೇರಿದ ಮಕ್ಕಳ ಪ್ರಾಥಮಿಕ ಶಿಕ್ಷಣಕ್ಕೆ ನೆರವು ಹಾಗೂ ಉತ್ತೇಜನ ನೀಡುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಂತೆ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ವಿಜಯಕುಮಾರ ಆಜೂರ, ಮಹಾನಗರ ಪಾಲಿಕೆ ಉಪ ಆಯುಕ್ತ ಮಹಾವೀರ ಬೋರಣ್ಣವರ, ಹಿಂದುಳಿದ ವರ್ಗಳ ಕಲ್ಯಾಣ ಇಲಾಖೆ ಅಧಿಕಾರಿ ಈರಣ್ಣ ಆಶಾಪುರ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಪುಂಡಲೀಕ ಮಾನವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಕೆ.ಚವ್ಹಾಣ ಸೇರಿದಂತೆ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

# ನೂತನ ಶಾಲಾ ಕಟ್ಟಡ ಶಂಕುಸ್ಥಾಪನೆ



ಆಲಮೇಲ : ಪಟ್ಟಣದ ಗುಣಾರಿ ಲೇಔಟ್, ಸಿಂದಗಿ ರಸ್ತೆ, ಆಲಮೇಲದ ಶ್ರೀ ಬಸವೇಶ್ವರ ಕನ್ನಡ ಪೂರ್ವ ಹಾಗೂ ಹಿರಿಯ ಪ್ರಾಥಮಿಕ ಶಾಲೆಯ ನೂತನ ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನ ಶಾಸಕ ಅಶೋಕ ಮನಗೂಳಿಯವರು ನೆರವೇರಿಸಿದರು.

ಬಳಿಕ ಮಾತನಾಡಿ ಈ ಶಿಕ್ಷಣ ಸಂಸ್ಥೆಗೆ 5 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ ಎಂದರು. ಮುಂದಿನ ದಿನಮಾನಗಳಲ್ಲಿ ಈ ಶಾಲೆಯ ಅಭಿವೃದ್ಧಿಗೆ ಸಹಾಯ ಸಹಕಾರ ನೀಡುತ್ತೇನೆ ಎಂದರು.

ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಹಾಗೂ ವಿವಿಧ ಕಲೆಗಳನ್ನ ಪ್ರದರ್ಶಿಸಿದರು. ಪೂಜ್ಯ ಭಂತೆ ಸಂಘಪಾಲ, ಧಮ್ಮವಿಜಯ ಬುದ್ಧ ವಿಹಾರ ಸಿಂದಗಿ, ಪೂಜ್ಯ ಶ್ರೀ ಶ್ರೀಶೈಲಯ್ಯ ಸ್ವಾಮಿಗಳು, ವೈದ್ಯನಾಥ ಮಹಾರಾಜರು, ಸಾನಿಧ್ಯ ವಹಿಸಿದರು, ಸಮಾರಂಭದಲ್ಲಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ವಿಜಯಕುಮಾರ ಯಂಟಮಾನ ವಹಿಸಿದರು. ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸುರೇಶ ನಾಯಕ, ಹಿರಿಯರಾದ ಗುಂಡು ಮೇಲಿನಮನಿ, ಡಾ. ರಾಜೇಶ ಪಾಟೀಲ, ಮಲ್ಲಿಕಾರ್ಜುನ ಜೋಗೂರ, ಕಾಂಗ್ರೇಸ್ ಮುಖಂಡರಾದ ರಮೇಶ ಭಂಟನೂರು, ಅಶೋಕ ಕೊಳಾರಿ, ಪುಂಡಲಿಕ ದೊಡ್ಡಮನಿ, ಹಾಗೂ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

# ಕಲೆಗೆ ಬೆಲೆಕಟ್ಟಲಾಗದು: ಸವಿತಾ ದೇಶಮುಖ



ವಿಜಯಪುರ : ಕರ್ನಾಟಕವೆಂದರೆ ಬರಿ ಕಲ್ಲು-ಮಣ್ಣಿನ ಸಂಪತ್ತಲ್ಲ. ಅದರೊಟ್ಟಿಗೆ ಇಲ್ಲಿರುವ ಜ್ಞಾನ, ವಿಜ್ಞಾನ, ಸಂಸ್ಕೃತಿ, ಸಾಹಿತ್ಯ, ಕಲೆ ಮುಂತಾದವುಗಳು ನಮ್ಮ ನಾಡಿನ ಸಂಪತ್ತಿನ ಭಾಗವಾಗಿವೆ. ಆಧುನಿಕ ತಂತ್ರಜ್ಞಾನದ ಓಘದಲ್ಲಿ ಜನಪದ ಕಲೆಗಳು ನಶಿಸಬಾರದು. ಈ ನಾಡಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ಕಲೆಯೇ ಜನಪದದ ಹಾಡು-ಪಾಡುಗಳಾಗಿವೆ. ಇಂದು ಟಿ.ವಿ, ಮೊಬೈಲ್, ಸಿನೆಮಾ ಹಾವಳಿಯ ಮಧ್ಯೆ ನಮ್ಮ ಜನಪದ ಕಲೆಗಳು ಮಂಕಾಗಬಾರದು. ಕಲೆ ಮತ್ತು ಕಲೆಗಾರರಿಗೆ ಎಂದೂ ಬೆಲೆಕಟ್ಟಲಾಗದು ಎಂದು ಆಕಾಶವಾಣಿ ಪ್ರವಾಚಕಿ ಸವಿತಾ ದೇಶಮುಖ ನುಡಿದರು.

ವಿಜಯಪುರ ನಗರದ ಕೆ.ಎಸ್.ಆರ್.ಟಿ.ಸಿ ಕಾಲನಿಯಲ್ಲಿರುವ ಎಕ್ಸಲಂಟ್ ಪದವಿ ಪೂರ್ವ ವಿಜ್ಞಾನ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾದ 'ಸಾಂಸ್ಕೃತಿಕ ಕಲರವ' ಸಮಾರಂಭದಲ್ಲಿ ಆಯೋಜಿಸಲಾದ ಯಕ್ಷಗಾನ ಕಲಾ ಪ್ರಸಂಗ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ದೆಸೆಯಿಂದಲೇ ಕಲೆಯಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ಕಲೆಗೆ ಲಿಂಗ, ಭಾಷೆ, ಪ್ರಾದೇಶಿಕ ಭಿನ್ನತೆ ಇರುವದಿಲ್ಲ. ಕರಾವಳಿಯ ಯಕ್ಷಗಾನ ಕಲೆ ಇಂದು ವಿಶ್ವವ್ಯಾಪಿಯಾಗಿ ಬೆಳೆಯಲು ಆ ಭಾಗದ ಯುವಕರ ಅಭಿರುಚಿಯೇ ಕಾರಣ ಎಂದು ನುಡಿದರು. ಅತಿಥಿಗಳಾದ ಸಮಾಜ ಸೇವಕಿ ಸುಗಂಧಾ ಕಬಾಡೆ ಮಾತನಾಡಿ, ವಿದ್ಯಾರ್ಥಿಗಳಲ್ಲಿರುವ ವೇದಿಕೆ ಭಯ ದೂರವಾಗಬೇಕಾದರೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು. ನೃತ್ಯ, ಗಾಯನ, ನಾಟಕ ಮುಂತಾದವುಗಳಲ್ಲಿ ಪಾಲ್ಗೊಂಡು ಜೀವನೋತ್ಸಾಹವನ್ನು ಇಮ್ಮಡಿಗೊಳಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಯ ನಿರ್ದೇಶಕಿ ಪುಷ್ಪಾ ಬಸವರಾಜ ಕೌಲಗಿಯವರು ಮಾತನಾಡಿ, ಬದುಕಿನ ದಣಿವನ್ನು ನೀಗಿಸುವಂತಹ ಶಕ್ತಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗಿದೆ. ಇಂದು ವಿದ್ಯಾರ್ಥಿಗಳಿಗೆ ಸಹನೆ ಮತ್ತು ಆತ್ಮವಿಶ್ವಾಸದ ಕೊರತೆ ಇದೆ. ಅವರನ್ನು ಪುನಶ್ಚೇತನಗೊಳಿಸಲು ಮನರಂಜನೆ ಕಾರ್ಯಕ್ರಮಗಳು ಅತ್ಯವಶ್ಯಕ. ನಗರದ ಜೀವನ ಒತ್ತಡದಿಂದ ಕೂಡಿದೆ. ಈ ಒತ್ತಡವನ್ನು ನಿಭಾಯಿಸಲು ಯೋಗ, ಧ್ಯಾನಗಳ ಜೊತೆಗೆ ಸಂಗೀತ, ನಾಟಕಗಳನ್ನು ನೋಡುವುದಾಗಿದೆ. ಹಳ್ಳಿಗಳಲ್ಲಿ ಮುಂಚೆ ಜಾತ್ರೆ ಉತ್ಸವಗಳಲ್ಲಿ ದೊಡ್ಡಾಟ, ಬಯಲಾಟ, ನಾಟಕ, ಭಜನೆ ಇರುತ್ತಿದ್ದವು. ಇಂದು ಸಿನೆಮಾ ಯುಗದಲ್ಲಿ ಅದೆಲ್ಲಾ ಕಣ್ಮರೆಯಾಗುತ್ತಿರುವುದು ವಿಷಾದನೀಯ. ಈ ದಿಸೆಯಲ್ಲಿ ಎಕ್ಸಲಂಟ್ ಕಾಲೇಜು ವಿದ್ಯಾರ್ಥಿಗಳಿಗೆ ಓದಿನೊಂದಿಗೆ ಯಕ್ಷಗಾನ ಕಲೆಯ ರಸದೌತಣ ನೀಡುತ್ತಿರುವುದು ನಮ್ಮ ಸಂಸ್ಥೆಯ ಮೂಲ ಆಶಯಗಳಲ್ಲಿ ಒಂದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಬಸವರಾಜ ಕೌಲಗಿ, ಪ್ರಾಚಾರ್ಯ ಶ್ರೀಕಾಂತ ಕೆ.ಎಸ್, ಆಡಳಿತಾಧಿಕಾರಿ ಪರಶುರಾಮ ಭಾವಿಕಟ್ಟಿ ಉಪಸ್ಥಿತರಿದ್ದರು.

ಶರಣಗೌಡ ಪಾಟೀಲ ಸ್ವಾಗತಿಸಿದರು, ರಮೇಶ ಬಾಗೇವಾಡಿ ನಿರೂಪಿಸಿ, ವಂದಿಸಿದರು.

ಸಿರಸಿ ಮಾರಿಕಾಂಬ ಯಕ್ಷಗಾನ ತಂಡದವರು ಸೀತಾ ಕಲ್ಯಾಣ ಪ್ರಸಂಗವನ್ನು ರಸವತ್ತಾಗಿ ಅಭಿನಯಿಸಿದರು. ಹನುಮಂತನ ಪಾತ್ರಧಾರಿ ಶಾಂತರಾಜ ಶೆಟ್ಟಿಯವರ ನೃತ್ಯ ಎಲ್ಲ ವಿದ್ಯಾರ್ಥಿಗಳ ಮನಸೂರೆಗೊಂಡಿತು.

# ಸ್ಥಳಾಭಾವ ಸಿಎಂಗೆ ಆಹ್ವಾನವಿಲ್ಲ: ಜೋಶಿ



ವಿಜಯಪುರ : ರಾಮ ಮಂದಿರ ಉದ್ಘಾಟನೆಗೆ ಸ್ಥಳದ ಅಭಾವ ಇದೆ. ಅಲ್ಲಿನ ವ್ಯವಸ್ಥೆ ಸೀಮಿತವಾಗಿದೆ. ಹೀಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಆಹ್ವಾನ ನೀಡಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ಮಂಗಳವಾರ ವಿಜಯಪುರ ನಗರದ ಸೈನಿಕ ಶಾಲಾ ಆವರಣದಲ್ಲಿರುವ ಹೆಲಿಪ್ಯಾಡ್ ನಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಹ್ವಾನ ನೀಡಿಲ್ಲ ಎಂಬ ಮಾಜಿ ಸಚಿವ ಆಂಜನೇಯ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯೆ ನೀಡಿ ಮಾತನಾಡಿದ ಅವರು, ಆಂಜನೇಯಗೆ ಸದ್ಬುದ್ದಿ ಬರಲಿ. ಯಾವ ರಾಜ್ಯದ ಬಿಜೆಪಿ ಸಿಎಂಗೂ ಕರೆದಿಲ್ಲ. ನಾನು ಭಾರತ ಸರ್ಕಾರ ಮಂತ್ರಿ ನನ್ನನ್ನೂ ಕರೆದಿಲ್ಲ.

ನನಗೆ ಕರೆಯೋದಲ್ಲ ಬರಬೇಡಿ ಎಂದು ಹೇಳಿದ್ದಾರೆ ಎಂದು ನುಡಿದರು.

ಯಾರನ್ನು ಕರೆಯಬೇಕು, ಕರೆಯಬಾರದು ಅನ್ನುವುದು ಶ್ರೀ ರಾಮ ಮಂದಿರ ಕಮೀಟಿಯ ಸ್ವತಂತ್ರ ನಿರ್ಧಾರವಾಗಿರುತ್ತದೆ ಎಂದರು.

# ಒಂದು ವರ್ಷದಲ್ಲಿ ಎರಡರಿಂದ ಮೂರು ಪಟ್ಟು ಸಿರಿಧಾನ್ಯ ರಫ್ತು ನಮ್ಮ ಗುರಿ: ಸಚಿವ ಚೆಲುವರಾಯ ಸ್ವಾಮಿ



ಬೆಂಗಳೂರು : ರಾಜ್ಯ ಸರ್ಕಾರ ಸಾವಯವ ಕೃಷಿಗೆ ವಿಶೇಷ ಒತ್ತು ನೀಡಿದ್ದು, ಮುಂದಿನ ಒಂದು ವರ್ಷದಲ್ಲಿ ಸಿರಿಧಾನ್ಯ ಉತ್ಪಾದನೆ ಮತ್ತು ರಫ್ತು ಚಟುವಟಿಕೆಯಲ್ಲಿ ಇಡೀ ದೇಶದಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿರಬೇಕು. ರಫ್ತು ಪ್ರಮಾಣ ಎರಡರಿಂದ ಮೂರು ಪಟ್ಟು ಏರಿಕೆ ಮಾಡುವುದು ನಮ್ಮ ಗುರಿ ಎಂದು ಕೃಷಿ ಸಚಿವ ಚೆಲುವರಾಯ ಸ್ವಾಮಿ ಹೇಳಿದ್ದಾರೆ.

ಜನವರಿ 5 ರಿಂದ ಮೂರು ದಿನಗಳ ಕಾಲ ಅರಮನೆ ಮೈದಾನದಲ್ಲಿ ನಡೆಯಲಿರುವ ನಡೆಯಲಿರುವ ಅಂತರರಾಷ್ಟ್ರೀಯ ಸಿರಿಧಾನ್ಯ ವಾಣಿಜ್ಯ ಮೇಳದ ಹಿನ್ನೆಲೆಯಲ್ಲಿ "ಸಿರಿಧಾನ್ಯಗಳು ಮತ್ತು ಅದರ ಮೌಲ್ಯ ವರ್ಧಿತ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯ ಅನ್ವೇಷಣೆ" ಕುರಿತ ರಫ್ತುದಾರರ ಸಮಾವೇಶದಲ್ಲಿ ಮಾತನಾಡಿದ ಸಚಿವರು, ಮೊದಲ ಬಾರಿಗೆ 2017 ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಸಿರಿಧಾನ್ಯಕ್ಕೆ ಹೆಚ್ಚಿನ ಮಹತ್ವ ನೀಡಿ ಅಂತರರಾಷ್ಟ್ರೀಯ ಸಮಾವೇಶ ನಡೆಸಿತು. ನಂತರ ಬರಗಾಲ ಹಿನ್ನೆಲೆಯಲ್ಲಿ ಪರ್ಯಾಯ ಬೆಳೆ ಪದ್ಧತಿ ಕುರಿತು ಚಿಂತನೆ ನಡೆಸಿದ ಪರಿಣಾಮ ಮೊದಲ ಬಾರಿಗೆ 2017ರಲ್ಲಿ ಪರಿಷ್ಕೃತ ಸಾವಯುವ ನೀತಿಯನ್ನು ಹೊರತರಲಾಯಿತು ಎಂದರು. ರಾಜ್ಯ ಸರ್ಕಾರ ಸಾಂಪ್ರದಾಯಿಕ ಮತ್ತು ಸಾವಯುವ ಪದ್ಧತಿಯಲ್ಲಿ ಬೆಳೆದ ಸಿರಿಧಾನ್ಯಗಳನ್ನು "ಪುಜ್ಞಾವಂತ ಆಹಾರ" ವಾಗಿ ಉತ್ತೇಜಿಸುತ್ತಿದೆ. ಒಂದು ಹೆಕ್ಟೇರ್ ಉತ್ಪಾನೆಗೆ ಹತ್ತು ಸಾವಿರ ರೂ ಪ್ರೋತ್ಸಾಹ ಧನ ನೀಡುತ್ತಿದ್ದು, ಬರುವ ದಿನಗಳಲ್ಲಿ ಈ ಮೊತ್ತ ಹೆಚ್ಚಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಮುಂದಿನ ವರ್ಷದ ವೇಳೆಗೆ ರಫ್ತು ಪ್ರಮಾಣ ದ್ವಿಗುಣ, ತ್ರಿಗುಣಗೊಳಿಸಬೇಕು. ರಫ್ತು ಮತ್ತು ಉತ್ಪಾದನೆಯಲ್ಲಿ ಕರ್ನಾಟಕ ಮೊದಲ ಸ್ಥಾನಕ್ಕೆ ತಲುಪುವುದು ನಮ್ಮ ಗುರಿ. ರಫ್ತು ಮಾಡುವವರಿಗೆ ಕೆಫೆಕ್ ನಿಂದ ಎಲ್ಲಾ ರೀತಿಯ ನೆರವು ನೀಡಲಾಗುವುದು. ಕಡಿಮೆ ನೀರು, ಹೆಚ್ಚು ಶ್ರಮವಿಲ್ಲದೇ ಬೆಳೆಯಲು ಅವಕಾಶವಿದೆ. ಇದೀಗ ಪಂಚ ತಾರಾ. ಸಪ್ತತಾರಾ ಹೋಟೆಲ್ ಗಳಲ್ಲೂ ಸಿರಿಧಾನ್ಯಗಳ ಆಹಾರ ದೊರೆಯುತ್ತಿದೆ ಎಂದರು.

ಆಹಾರ ಸಂಸ್ಕರಣೆ ಮತ್ತು ಕಟಾವು ತಂತ್ರಜ್ಞಾನ ಇಲಾಖೆಯ ವಿಶೇಷ ಕಾರ್ಯದರ್ಶಿ, ರೋಹಿಣಿ ಸಿಂಧೂರಿ ಮಾತನಾಡಿ, ರಫ್ತು ಚಟುವಟಿಕೆ ಉದಯೋನ್ಮುಖ ವಲಯವಾಗಿದ್ದು, ಭಾರತದ ಆಹಾರ ಸಂಸ್ಕರಣಾ ವಲಯದಲ್ಲಿ ಶೇ 26 ರಷ್ಟು ಪ್ರಗತಿಯಾಗಿದೆ. ಕರ್ನಾಟಕದಲ್ಲಿ ಹತ್ತು ಕೃಷಿ ಹವಾಮಾನ ವಲಯಗಳಿದ್ದು, ಆರು ವಿಧದ ಮಣ್ಣು ವಿಧಗಳಿವೆ. ರಾಜ್ಯ 6ನೇ ಅತಿ ದೊಡ್ಡ ರಫ್ತು ರಾಜ್ಯವಾಗಿದೆ. ಸಿರಿಧಾನ್ಯಗಳ ರಫ್ತು ಚಟುಟಿಕೆಗೆ ವಿಶೇಷ ಗಮನಹರಿಸಲಾಗಿದೆ ಎಂದು ಹೇಳಿದರು.

ನಂತರ ಸಿರಿಧಾನ್ಯ ವಿಶೇಷತೆ ಕುರಿತು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವ ಚೆಲುವರಾಯ ಸ್ವಾಮಿ, ಪ್ರಸ್ತುತ ರಾಜ್ಯದಲ್ಲಿ 15.61 ಲಕ್ಷ ಹೆಕ್ಟೇರ್ ನಲ್ಲಿ ಸಿರಿಧಾನ್ಯ ಬೆಳೆಯಲಾಗುತ್ತಿದೆ. ಸಿರಿಧಾನ್ಯ ಮೇಳಕ್ಕೆ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ಸಂಸ್ಥೆಯು ನೋಡೆಲ್ ಸಂಸ್ಥೆಯಾಗಿದೆ. ಅಂತರಾಷ್ಟ್ರೀಯ ಸಂಶೋಧನಾ ಸಂಸ್ಥೆ ಜಿಐಝುಡ್ ಮತ್ತು ಐಐಎಂಆರ್ ಸಹ ಸಹಭಾಗಿ ಸಂಸ್ಥೆಗಳಾಗಿದ್ದು, ಐಸಿಸಿಓಎ ಸಂಸ್ಥೆಯು ವಸ್ತುಪ್ರದರ್ಶನದ ಪಾಲುದಾರ ಸಂಸ್ಥೆ ಎಂದರು.

ವಸ್ತುಪ್ರದರ್ಶನ: ಸಾವಯವ ಮತ್ತು ಸಿರಿಧಾನ್ಯಗಳ ಸಂಸ್ಥೆಗಳು, ಮಾರುಕಟ್ಟೆದಾರರು, ರಫ್ತುದಾರರು, ಚಿಲ್ಲರೆ ಮಾರಾಟಗಾರರು, ರೈತ ಗುಂಪುಗಳು, ಪ್ರಾಂತೀಯ ಒಕ್ಕೂಟಗಳು, ಸಾವಯವ ಪರಿಕರಗಳ ಸಂಸ್ಥೆಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಮತ್ತು ಸಂಸ್ಥೆಗಳು ವಸ್ತು ಪ್ರದರ್ಶನದಲ್ಲಿ ಭಾಗವಹಿಸುತ್ತಿವೆ. ಮೇಳದಲ್ಲಿ ಉತ್ತರ ಪುದೇಶ, ಪಂಜಾಬ್, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಒಡಿಸ್ಸಾ, ತಮಿಳುನಾಡು ಮತ್ತು ಮೇಘಾಲಯ ಮುಂತಾದ ರಾಜ್ಯಗಳು ಭಾಗವಹಿಸುತ್ತಿವೆ. ವಸ್ತು ಪುದರ್ಶನದಲ್ಲಿ 250ಕ್ಕೂ ಹೆಚ್ಚು ಮಳಿಗೆಗಳಿರುತ್ತವೆ ಎಂದರು.

ಕರ್ನಾಟಕ ಪೆವಿಲಿಯನ್ ನಲ್ಲಿ ಕರ್ನಾಟಕದ ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನ ಸಂಸ್ಥೆಗಳಿಂದ ಉತ್ತೇಜನಗೊಂಡಿರುವ ಕರ್ನಾಟಕದ ನವೋದ್ಯಮಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲಿದ್ದಾರೆ. ಸಿರಿಧಾನ್ಯ, ಸಾವಯವ ರೈತ ಗುಂಪುಗಳು, ಪ್ರಾಂತೀಯ ಒಕ್ಕೂಟಗಳು, ಹಾಗೆಯೇ ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು ಮತ್ತು ಸಂಸ್ಥೆಗಳು ಸೇರಿದಂತೆ ಒಟ್ಟು 100 ಮಳಿಗೆಗಳನ್ನು ತೆರೆಯಲಾಗಿದೆ. ಉತ್ಪಾದಕರು, ಮಾರುಕಟ್ಟೆದಾರರ ಸಮಾಲೋಚನಾ ಸಭೆಗಳನ್ನು ಏರ್ಪಡಿಸಲಾಗುತ್ತದೆ. ಎಂದು ಹೇಳಿದರು.

ಸಾವಯವ ಮತ್ತು ಸಿರಿಧಾನ್ಯ ಬೆಳೆಯುವ ರೈತರಿಗಾಗಿ ಕನ್ನಡ ಭಾಷೆಯಲ್ಲಿ ಮೂರು ದಿನಗಳ ಕಾರ್ಯಗಾರವನ್ನು ಕೃ.ವಿ.ವಿ ಸಂಶೋಧನಾ ವಿಭಾಗದಿಂದ ಆಯೋಜಿಸಲಾಗಿದೆ. 10 ವಿವಿಧ ಸಿರಿಧಾನ್ಯ ಹೋಟಲ್, ರೆಸ್ಟೋರೆಂಟ್‌ಗಳ ಮಳಿಗೆಗಳ ಮೂಲಕ ವೈವಿದ್ಯಮಯ ಮತ್ತು ರುಚಿಕರವಾದ ಸಿರಿಧಾನ್ಯಗಳ ಊಟ ಮತ್ತು ಉಪಹಾರಗಳನ್ನು ಸವಿಯಲು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಿಕೊಡಲಾಗಿದೆ ಎಂದರು.

ರಾಜ್ಯ ಮಿಡಿಸೌತೆ, ಗುಲಾಬಿ, ಈರುಳ್ಳಿ ಮತ್ತು ಕಾಫಿ ರಪ್ತಿನಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಸಿರಿಧಾನ್ಯಗಳು, ದಾಳಿಂಬೆ, ಕರಿಮೆಣಸು, ಅರಿಶಿನ, ಮೆಣಸಿನಕಾಯಿ, ಹಸಿರು ಮೆಣಸಿನಕಾಯಿ, ಮಾವು, ಬಾಳೆಹಣ್ಣು, ಬೆಲ್ಲ, ನೆಲಗಡಲೆ, ಒಣದ್ರಾಕ್ಷಿ, ಜಿಐಉತ್ಪನ್ನಗಳು, ಸಂಸ್ಕರಿಸಿದ ಆಹಾರಗಳು, ತರಕಾರಿ ಸೇರಿದಂತೆ ಹಲವಾರು ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ರಫ್ತು ಮಾಡಲು ರಾಜ್ಯವು ಗಮನಾರ್ಹ ಸಾಮರ್ಥ್ಯವನ್ನು ಹೊಂದಿದೆ ಎಂದರು.

ಕೃಷಿ ಆಯುಕ್ತರಾದ ಎನ್.ವೈ. ಪಾಟೀಲ್. ಕಾರ್ಯದರ್ಶಿ ಅನ್ಬು ಕುಮಾರ್, ಕೃಷಿ ಇಲಾಖೆ ನಿರ್ದೇಶಕರಾದ ಡಾ. ಜಿ.ಟಿ. ಪುತ್ರ ಮತ್ತಿತರರು ಉಪಸ್ಥಿತರಿದ್ದರು.

# ಡಾ. ಬಿ.ಆರ್. ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಪಾಲಿಸಿ: ರೂಪಾ ಕಾಂಬಳೆ



ಅಥಣಿ : ಶ್ರೇಷ್ಠ ಮಾನವತಾವಾದಿ, ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಸರ್ವರಿಗೂ ಸಮಪಾಲು, ಸಮಬಾಳು ತತ್ವವನ್ನು ಅಳವಡಿಸಿ ಶೋಷಿತ ಸಮಾಜಗಳಿಗೆ ಸಾಮಾಜಿಕ ನ್ಯಾಯ ದೊರಕಿಸಿ ಸಾಮಾಜಿಕ ಸಮಾನತೆಗಾಗಿ ಹೋರಾಡಿದ ವಿಶ್ವಜ್ಞಾನಿ ಹಾಗೂ ವಿಶ್ವ ನಾಯಕರಾಗಿದ್ದಾರೆ. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ದರೂರ ಜಿಪಂ ಮತಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತೆ ಹಾಗೂ ಸಮಾಜ ಸೇವಕಿ ರೂಪಾ ಕಾಂಬಳೆ ಹೇಳಿದರು

ಅವರು ತಾಲೂಕಿನ ಖವಟಕೊಪ್ಪ ಗ್ರಾಮದ ಡಾ. ಬಿ ಆರ್ ಅಂಬೇಡ್ಕರ್ ನಗರದಲ್ಲಿ ನಿರ್ಮಿಸಿರುವ ಡಾ. ಬಿ ಆರ್ ಅಂಬೇಡ್ಕರ್ ಮಹಾದ್ವಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಅಂಬೇಡ್ಕರ್ ಅವರು ಇಡೀ ಜಗತ್ತು ಮೆಚ್ಚುವಂತಹ ಸಂವಿಧಾನವನ್ನು ನೀಡಿದ್ದು, ಆ ಮೂಲಕ ಭಾರತದ ಆಡಳಿತ ವ್ಯವಸ್ಥೆಗೆ ಹೊಸ ಆಯಾಮ ತಂದು ಕೊಟ್ಟಿದ್ದಾರೆ.

ಅವರ ಜೀವನದಲ್ಲಿ ಬಡತನ ಹಾಗೂ ಅಸ್ಪೃಶ್ಯತೆ ಎರಡು ಕಾಡಿದ್ದವು. ಅದೆಲ್ಲವನ್ನೂ ಮೆಟ್ಟಿನಿಂತು ಸಾಧನೆ ಮಾಡಿ ಇಂದು ಚರಿತ್ರೆಯಲ್ಲಿ ಅಜರಾಮರರಾಗಿ ಉಳಿದಿದ್ದಾರೆ ಎಂದ ಅವರು ಅಂಬೇಡ್ಕರ್ ತಮ್ಮ ಬದುಕನ್ನು ಹೋರಾಟದಲ್ಲೇ ಕಳೆದು ನಮಗೆ ಸಮಾನತೆ ನೀಡದೇ ಇದ್ದಿದ್ದರೆ, ಇಂದು ಸಮಾನತೆ ಸಾಧ್ಯವಾಗುತ್ತಿರಲಿಲ್ಲ.

ಅಂದು ಅವರ ಬದುಕಿನ ಹೋರಾಟ ತ್ಯಾಗ ಇಂದು ನಮ್ಮೆಲ್ಲರ ಗೌರವದ ಬದುಕಿಗೆ ಮುನ್ನುಡಿ ಬರೆದಿದೆ ಎಂದರು

ಈ ಸಂದರ್ಭದಲ್ಲಿ ಉಮೇಶ ಕಾಂಬಳೆ. ನರಸು ಕಾಂಬಳೆ. ಸರದಾರ ಶಿವು ಕಾಂಬಳೆ. ಕರಣ ಕಾಂಬಳೆ. ಆಕಾಶ್ ಕಾಂಬಳೆ. ವಿನೋದ್ ಕಾಂಬಳೆ. ಪ್ರಮೋದ್ ಕಾಂಬಳೆ. ದಯಾನಂದ್ ಡಿಕೆ. ಸವಿತಾ ಕಾಂಬಳೆ. ಕುಸುಮಾ ಕಾಂಬಳೆ. ಕವಿತಾ ಮಾದರ. ಮದುಮತಿ ಕಾಂಬಳೆ. ಚಂದ್ರವ್ವಾ ಸರಿಕರ. ಸೇರಿದಂತೆ ಹಲವರು ಗಣ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು.

# ರಾಜ್ಯದ ಎಲ್ಲ ಮಹಿಳೆಯರಿಗೆ ಸರಕಾರ ಉನ್ನತ ಶಿಕ್ಷಣ ಉಚಿತವಾಗಿ ನೀಡಬೇಕು



ವಿಜಯಪುರ : ರಾಜ್ಯದ ಎಲ್ಲ ಮಹಿಳೆಯರಿಗೆ ಸರಕಾರ ಉನ್ನತ ಶಿಕ್ಷಣ ಉಚಿತವಾಗಿ ನೀಡಬೇಕು ಎಂಬುವುದು ಸೇರಿದಂತೆ ನಾಲ್ಕು ಮಹತ್ವದ ನಿರ್ಣಯಗಳನ್ನು ಜಿಲ್ಲಾ 2ನೇ ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನ ಅಂಗೀಕರಿಸಿದೆ.

ಕಳೆದ ಎರಡು ದಿನಗಳವರೆಗೆ ನಗರದಲ್ಲಿ ನಡೆದ ಜಿಲ್ಲಾ ಮಟ್ಟದ 2ನೇ ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಈ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ರಾಜ್ಯದ ಎಲ್ಲ ಮಹಿಳೆಯರಿಗೆ ಸರಕಾರ ಉನ್ನತ ಶಿಕ್ಷಣ ಉಚಿತವಾಗಿ ನೀಡಬೇಕು, ಉನ್ನತ ಶಿಕ್ಷಣದಲ್ಲಿ ಚಿನ್ನದ ಪದಕ ಪಡೆದ ಮಹಿಳೆಯರಿಗೆ ನೇರ ನೇಮಕಾತಿ ನೀಡಬೇಕು. ವಿಜಯಪುರ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ, ವೈದ್ಯಕೀಯ ಶಿಕ್ಷಣ ಹಾಗೂ ಸಾಮಾನ್ಯ ವಿಷಯಗಳ ಎಲ್ಲ ವಿಭಾಗಗಳನ್ನು ಪ್ರಾರಂಭಿಸಬೇಕು. ರಾಜ್ಯದ ಎಲ್ಲ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ನೇಮಕಾತಿ ಮಾಡಬೇಕು. ಮಕ್ಕಳ ಭವಿಷ್ಯ ಬರೆಯುವ ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಬೇಕು ಎಂದು ಪ್ರೊ. ಲತಾ ಹಾಸಿಂಪೀರ ವಾಲಿಕಾರ ಅವರು ನಾಲ್ಕು ಮಹತ್ವದ ನಿರ್ಣಯ ಮಂಡಿಸಿದರು. ಈ ನಾಲ್ಕು ನಿರ್ಣಯಗಳಿಗೆ ಶಕುಂತಲಾ ಕೊಪ್ಪದ ಹಾಗೂ ಪ್ರಭಾವತಿ ಗುಂದಗಿ ಅನುಮೋದಿಸಿದರು.

ಸೀಮಾ ಬಡಾನೂರ. ಗಿರಿಜಾ ಡೋಣೂರ. ವಿಜಯಲಕ್ಷ್ಮೀ ಬಿರಾದಾರ. ಅನ್ನಪೂರ್ಣ ಬೆಳ್ಳೆನವರ, ರಂಜನಾ ಕೆಂಬಾವಿ, ಶಿವಲೀಲಾ ಮಳಖೇಡ. ವಿಜಯಲಕ್ಷ್ಮಿ ಮಾನೆ, ಕಮಲಾ ಮುರಾಳ, ಸುಖದೇವಿ ಅಲಬಾಳಮಠ ಮುಂತಾದವರು ಕೈ ಎತ್ತುವದರ ಮೂಲಕ ವೇದಿಕೆಯಲ್ಲಿರವವರು ಬೆಂಬಲಿಸಿದರು.

ವಿಜಯಪುರ ನಗರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ನಡೆದ ಜಿಲ್ಲಾ 2 ನೇ ಮಹಿಳಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಹಿರಂಗ ಅಧಿವೇಶನದ ಅಧ್ಯಕ್ಷತೆ ವಹಿಸಿದ ಹಿರಿಯ ಸಾಹಿತಿ ವಿದ್ಯಾವತಿ ಅಂಕಲಗಿ ಮಾತನಾಡಿ, ಮಹಿಳೆಯರ ಅಂತರಂಗದಲ್ಲಿರುವ ಆಲೋಚನೆಗಳನ್ನು ಮುಕ್ತವಾಗಿ ಹೊರಹಾಕುವ ಈ ಸಮ್ಮೇಳನ ಅತ್ಯಂತ ಉಪಯುಕ್ತವಾಗಿದೆ. ಇಂದು ಮಹಿಳೆಯ ಸ್ಥಾನಮಾನ, ಶಕ್ತಿ ಮುಂತಾದವುಗಳ ಕುರಿತ ವಿಷಯಗಳ ಚಿಂತನೆಗಳಾಗಿವೆ ಎಂದು ಅಭಿಪ್ರಾಯಪಟ್ಟರು.

ಗುಣದಾಳ ಕಲ್ಯಾಣಮಠದ ವಿವೇಕಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸರ್ವಾಧ್ಯಕ್ಷರಾಗಿದ್ದ ಭಾರತಿ ಪಾಟೀಲ ಉಪಸ್ಥಿತಿಯಲ್ಲಿ ಬಹಿರಂಗ ಅಧಿವೇಶನ ಜರುಗಿತು.

## ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನ: ಅರ್ಜಿ ಆಹ್ವಾನ

ಬೆಳಗಾವಿ : ಬೆಳಗಾವಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಭಾರತದಯುವ ವ್ಯವಹಾರ ಮತ್ತು ಕ್ರೀಡಾ ಮಂತ್ರಾಲಯದಿಂದ ಮಾನ್ಯತೆ ಪಡೆದ ಕ್ರೀಡಾ ಸಂಘ ಸಂಸ್ಥೆಗಳಿಂದ 2023–24ನೇ ಸಾಲಿನಲ್ಲಿ (ಜನೇವರಿ–2023 ರಿಂದ ಡಿಸೆಂಬರ–2023 ರವರೆಗೆ) ಸಂಘಟಿಸಲಾದ ರಾಷ್ಟ್ರಮಟ್ಟದ ಪಂದ್ಯಾವಳಿಗಳಲ್ಲಿ ಪದಕ ವಿಜೇತ ಅಥವಾ ಅಂತರರಾಷ್ಟ್ರ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಿದ/ಪದಕ ವಿಜೇತ ಕ್ರೀಡಾಪಟುಗಳಿಗೆ ಪ್ರೋತ್ಸಾಹಧನಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಕ್ರೀಡಾಪಟುಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಉಪ ನಿರ್ದೇಶಕರಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಬೆಳಗಾವಿ ಇವರಿಗೆ ದಿನಾಂಕ ಜನವರಿ 12, 2024ರ ಒಳಗಾಗಿ ಸಲ್ಲಿಸಬೇಕು.

ಹೆಚ್ಚಿನ ವಿವರಗಳಿಗಾಗಿ ಸದರಿಯವರ ಕಛೇರಿ ದೂರವಾಣಿ 0831–2950306 ನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಂಜುಳಾ ಕಲ್ಯಾಣಿ ಅವರಿಗೆ ಗೌರವ ಡಾಕ್ಟರೇಟ್



ಮುಧೋಳ : ತಾಲ್ಲೂಕಿನ ರನ್ನ ಬೆಳಗಲಿಯ ಸರ್ಕಾರಿ ಪ್ರೌಢಶಾಲಾ ಇಂಗ್ಲೀಷ್ ಭಾಷಾ ಶಿಕ್ಷಕಿ ಮಂಜುಳಾ .ಸಿದ್ದಪ್ಪ.ಕಲ್ಯಾಣಿ ಯವರಿಗೆ ಏಷಿಯಾ ವೇದಿಕ್ ಕಲ್ಚರ್ ವಿಶ್ವವಿದ್ಯಾಲಯ ,ಇಂಟರ್ ನ್ಯಾಷನಲ್ ಅಕ್ರಡೇಶಿಯನ್ ಆರ್ಗನೈಜ ( ಯು ಎಸ್ ಎ)ಅವರಿಂದ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಲಾಗಿದೆ.

ತಮಿಳುನಾಡಿನ ಹೊಸೂರಿನ ಹಿಲ್ಸ್ ಹೊಟೇಲ್ ನಲ್ಲಿ ಡಿಸೆಂಬರ್ 30 ರಂದು ನಡೆದ ಭವ್ಯ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಗಿದೆ. ಶಿಕ್ಷಣ, ಸಾಹಿತ್ಯ, ಸಂಸ್ಕೃತಿ, ಸಂಗೀತ, ಕಲೆ(ಸಿನೇಮಾ) ಹೀಗೆ ಹಲವಾರು ರಂಗಗಳಲ್ಲಿ ಮಂಜುಳಾ ಕಲ್ಯಾಣಿ ಯವರು ಸಲ್ಲಿಸಿದ ಸೇವೆಗಳನ್ನು ಪರಿಗಣಿಸಿ ಡಾಕ್ಟರೇಟ್ ಪದವಿ ನೀಡಲಾಗಿದೆ . ಶಿಕ್ಷಣಕ್ಕೆ ಸಂಬಂಧಿಸಿದಂತೆ "ಆಕಾಶಬುಟ್ಟಿ"ಎಂಬ ಅವರ ಕಿರುಚಿತ್ರ ವಿಶೇಷವಾಗಿ ಶಾಲೆಬಿಟ್ಟ ಮಕ್ಕಳನ್ನು ಶಾಲೆಗೆ ಮರಳಿ ಕರೆತರುವ ಒಂದು ವಿಭಿನ್ನ ಪ್ರಯತ್ನ ಗಮನಸೆಳೆದಿರುವದನ್ನ ಈ ಸಂದರ್ಭದಲ್ಲಿ ಸ್ಮರಿಸಬಹುದು.

# ಅನಧಿಕೃತ ನೀರಿನ ಜೋಡಣೆ ಕಡಿತ



ಮಹಾಲಿಂಗಪುರ: ಪಟ್ಟಣದ ವಿವಿಧ ಬಡಾವಣೆಗಳಲ್ಲಿ ಅನಧಿಕೃತವಾಗಿ ಹೊಂದಿರುವ ನೀರಿನ ಜೋಡಣೆಯನ್ನು ಪುರಸಭೆ ಮುಖ್ಯಾಧಿಕಾರಿ ಈರಣ್ಣ ದಡ್ಡಿ ನೇತೃತ್ವದಲ್ಲಿ ಕಡಿತ ಮಾಡಲಾಯಿತು.

ಅಕ್ರಮ ನೀರಿನ ಸಂಪರ್ಕವನ್ನು ಸಕ್ರಮ ಮಾಡಿಕೊಳ್ಳುವಂತೆ ಸಾರ್ವಜನಿಕರಿಗೆ ಹಲವು ಬಾರಿಗಡುವು ವಿಧಿಸಲಾಗಿದ್ದರೂ ಕೆಲವರು ಸಕ್ರಮ ಮಾಡಿಕೊಂಡಿಲ್ಲ. ಅಲ್ಲದೆ, ಕೆಲವರು ನೀರಿನಕರ ಬಾಕಿ ಉಳಿಸಿಕೊಂಡಿದ್ದಾರೆ.ಇದರಿಂದ ಪುರಸಭೆಯು ಆದಾಯಕ್ಕೆ ಖೋತಾ ಬೀಳುತ್ತಿದೆ.ತಕ್ಷಣ ಬಾಕಿ ಉಳಿಸಿಕೊಂಡಿರುವ ನಳದ ಜೋಡಣೆ ಹೊಂದಿರುವ ಮಾಲೀಕರು ಪುರಸಭೆಗೆ ನೀರಿನಕರ ಪಾವತಿ ಮಾಡಿ ಪುರಸಭೆ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮುಖ್ಯಾಧಿಕಾರಿ ಈರಣ್ಣ ದಡ್ಡಿ ಹೇಳಿದರು.

ಪುರಸಭೆ ವ್ಯವಸ್ಥಾಪಕ ಎಸ್.ಎನ್.ಪಾಟೀಲ, ಎಂ.ಎಂ.ಮುಗಳಖೋಡ, ಎಂ.ಕೆ.ದಳವಾಯಿ, ಡಿ.ಕೆ.ಜಮಖಂಡಿ, ಎಸ್.ಜಿ.ಕತ್ತಿ, ಎಸ್.ಆರ್.ಮಾವಿನಹಿಂಡಿ, ಎಂ.ಡಿ.ಮಹಾಲಿಂಗ, ಮಹಾಲಿಂಗ ಗಸ್ತಿ ಸೇರಿದಂತೆ ನೀರು ಸರಬರಾಜು ವಿಭಾಗದ ಸಿಬ್ಬಂದಿ ಇದ್ದರು.

# ಚಿತ್ರಕಲಾ ಪರೀಕ್ಷೆಯಲ್ಲಿ ಸಾಧನೆ



ನವಲಗುಂದ : ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಧಾರವಾಡ ತಾಲೂಕಿನ ಹೆಬ್ಬಳ್ಳಿಯ ನೆಹರು ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಚಿತ್ರಕಲಾ ಪರೀಕ್ಷೆಯಲ್ಲಿ ಸುಳ್ಳ ಗ್ರಾಮದ ಶ್ರೀ ಶಿವಾನಂದ ಭಾರತಿ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿನಿಯರು ಉತ್ತಮ ಫಲಿತಾಂಶ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಈ ಹಿರಿಯ ಶ್ರೇಣಿ ಪರೀಕ್ಷೆಯಲ್ಲಿ ವಿದ್ಯಾರ್ಥಿನಿಯರಾದ ಭಾಗ್ಯ ಜಿ ಮಣಕವಾಡ. 483 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾರೆ. ಎನ್ ಲಕ್ಷ್ಮೇಶ್ವರ 477 ಅಂಕಗಳನ್ನು ಪಡೆದು ದ್ವಿತೀಯ ಸ್ಥಾನ ಪಡೆದರೆ. ಕುಮಾರಿ ವಿಜಯಲಕ್ಷ್ಮಿ ಕೆ ನಂದೆಣ್ಣವರ 472 ಅಂಕಗಳು ಪಡೆದು ಕೇಂದ್ರಕ್ಕೆ ತೃತೀಯ ಸ್ಥಾನ ಪಡೆದಿದ್ದಾರೆ.

ಕಿರಿಯ ಶ್ರೇಣಿ ಪರೀಕ್ಷೆಯಲ್ಲಿ ಪ್ರಿಯಾಂಕ ಕಳಸಣ್ಣವರ 433 ಅಂಕಗಳನ್ನು ಪಡೆದು ಸ್ಥಾನ ಪಡೆದಿದ್ದಾಳೆ. ಶಾಲೆಗೆ ಕೀರ್ತಿ ತಂದ ಈ ವಿದ್ಯಾರ್ಥಿನಿಯರಿಗೆ ಶಾಲಾ ಮಂಡಳಿಯ ಅಧ್ಯಕ್ಷರು ಸರ್ವ ಸದಸ್ಯರು ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ಕಲಾವಿದರು ನಾಡಿನ ಸಾಂಸ್ಕೃತಿಕ ರಾಯಭಾರಿಗಳು: ಸವದಿ




ಮಹಾಲಿಂಗಪುರ: ಕಲಾವಿದರು ಈ ನಾಡಿನ ಸಾಂಸ್ಕೃತಿಕ ರಾಯಭಾರಿಗಳು. ಸಾಂಸ್ಕೃತಿಕ ಲೋಕಕ್ಕೆ ಕಲಾವಿದರ ಕೊಡುಗೆ ಅಪಾರವಾಗಿದೆ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಪಟ್ಟಣದ ಬನಶಂಕರಿದೇವಿ ಸಾಂಸ್ಕೃತಿಕ ಭವನದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕರ್ನಾಟಕ ಸಂಭ್ರಮ–50ರ ಅಂಗವಾಗಿ ಹಮ್ಮಿಕೊಂಡ ಸಾಂಸ್ಕೃತಿಕ ಸೌರಭ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿದೆ.

ಕಲಾವಿದರುಕಲೆಯನ್ನು ಬೆಳೆಸಲು ಪ್ರಯತ್ನಿಸಬೇಕು. ಮುಂದಿನ ಯುವ ಪೀಳಿಗೆಗೆ ತರಬೇತಿಕಾರ್ಯಾಗಾರ ಹಮ್ಮಿಕೊಳ್ಳಬೇಕು ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಜಿ.ಎಸ್.ಗೊಂಬಿ ಮಾತನಾಡಿ, ಜಾಪದಕಲೆಯನ್ನುಇಂದಿನ ಯುವ ಪೀಳಿಗೆ ಮುಂದುವರೆಸಿ ಕೊಂಡು ಹೋಗಬೇಕಾಗಿದೆ. ಕಲಾವಿದರು ಇತರ ಕಲಾವಿದರನ್ನು ಪ್ರೋತ್ಸಾಹಿಸುವ ಗುಣ ಬೆಳೆಸಿಕೊಳ್ಳಬೇಕು. ಮೊಬೈಲ್ ಹಾವಳಿಯಿಂದಾಗಿ ನಮ್ಮ ಸಾಂಪ್ರದಾಯಿಕ ಕಲೆಗಳು ನಶಿಸಿಹೋಗುತ್ತಿವೆ. ಈ ಕಲೆಗಳನ್ನು ಉಳಿಸುವ ಪ್ರಯತ್ನ ಮಾಡಬೇಕಾಗಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಿಲ್ಲಾ ಸಹಾಯಕ ನಿರ್ದೇಶಕ ಕರ್ಣಕುಮಾರ ಕೆ., ಪುರಸಭೆ ಮುಖ್ಯಾಧಿಕಾರಿ ಈರಣ್ಣದಡ್ಡಿ, ಬಸವರಾಜ ಮೇಟಿ ಉಪಸ್ಥಿತರಿದ್ದರು.

ಉದ್ಘಾಟನೆ ಕಾರ್ಯಕ್ರಮ ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಸೆಳೆದವು. ಮಂಜುಳಾ ಸಂಭಾಳದ ಹಾಗೂ ತಂಡದಿಂದ ಸುಗಮ ಸಂಗೀತ, ಕುಮಾರ ಬಡಿಗೇರ ಹಾಗೂ ಸಂಗಡಿಗರಿಂದ ಶಾಸ್ತ್ರೀಯ ಸಂಗೀತ, ಭಾರ್ಗವಿ ಮೋರಟಗಿ ಹಾಗೂ ಸಂಗಡಿಗರಿಂದ ಸಮೂಹ ನೃತ್ಯ, ಎಂ.ಡಿ.ಆನಂದ ಹಾಗೂ ಸಂಗಡಿಗರಿಂದ ಜನಪದ ಗೀತೆ, ರುದ್ರಯ್ಯ ರಾಚಯ್ಯ ಸಾಲಿಮಠ ಹಾಗೂ ತಂಡದಿಂದ ಹಳ್ಳಿಯಿಂದ ದಿಲ್ಲಿವರೆಗೆ ನಾಟಕ, ಶರಣ ಬಸವ ಶಾಸ್ತ್ರೀಗಳಿಂದ ಗಮಕ ಕಥಾಕೀರ್ತನೆ, ಚನ್ನಮಲ್ಲಪ್ಪ ಕರಡಿ ಹಾಗೂ ಸಂಗಡಿಗರಿಂದ ಕರಡಿ ಮಜಲು, ಮರೆಪ್ಪ ಕಲ್ಲಪ್ಪ ಬೆಳಗಲಿ ಹಾಗೂ ಸಂಗಡಿಗರಿಂದ ಗೊಂಬೆ ಕುಣಿತ, ಕೆಂಚಪ್ಪ ದ್ಯಾವಪ್ಪ ಬಡಿಗೇರ ಹಾಗೂ ಸಂಗಡಿಗರಿಂದ ಕೀಲು ಕುಣಿತ ಪ್ರದರ್ಶನಗೊಂಡವು.

## ಆನಂದ ಹಳ್ಳಿ ನಿಧನ



ಮಹಾಲಿಂಗಪುರ: ಪಟ್ಟಣದ ಗಣೇಶ ನಗರ ನಿವಾಸಿ ಆನಂದ ಅಶೋಕ ಹಳ್ಳಿ (38) ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ, ಪುತ್ರ, ಸಹೋದದರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಬಾರದ ಅತಿಥಿ ಉಪನ್ಯಾಸಕರು: ಪರದಾಡುತ್ತಿರುವ ವಿದ್ಯಾರ್ಥಿಗಳು



ಅತಿಥಿ ಉಪನ್ಯಾಸಕರು ಮುಷ್ಕರದಲ್ಲಿ ತೊಡಗಿರುವುದರಿಂದ ಕಾಲೇಜು ಪ್ರಾಚಾರ್ಯರೇ ದಿನನಿತ್ಯ ಎರಡು ಗಂಟೆಗಳ ಕಾಲ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ತರಬೇತಿಯನ್ನು ನೀಡುತ್ತಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿದೆ ಎನ್ನುತ್ತಾರೆ ಇಲ್ಲಿಯ ಬಿ. ಎ. ವಿದ್ಯಾರ್ಥಿ ತೌಸಿಫ್ ಹಲಗಲಿ.

---

ಆಸಕ್ತ ವಿದ್ಯಾರ್ಥಿಗಳು ದಿನನಿತ್ಯ ಕಾಲೇಜಿಗೆ ಬರುತ್ತಿದ್ದಾರೆ. ಅವರಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ತರಬೇತಿಯನ್ನು ನೀಡಲಾಗುತ್ತಿದೆ. ಬೇರೆ ಕಾಲೇಜುಗಳ ಉಪನ್ಯಾಸಕರನ್ನು ಆಹ್ವಾನಿಸಿ ಅವರಿಂದ ವಿವಿಧ ವಿಷಯಗಳ ಕುರಿತು ವಿಶೇಷ ಉಪನ್ಯಾಸವನ್ನು ಕೂಡಾ ನೀಡಲಾಗುತ್ತಿದೆ. ಈಗಾಗಲೇ ಈ ನಿಟ್ಟಿನಲ್ಲಿ ಕಾಲೇಜಿನಲ್ಲಿ ನಾಲ್ಕಾರು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

**–ಚೇತನ ಡಾಗಾ, ಪ್ರಾಚಾರ್ಯರು,**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಬಕವಿ– ಬನಹಟ್ಟಿ.**

ರಬಕವಿ–ಬನಹಟ್ಟಿ: ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರು ಮುಷ್ಕರ ನಡೆಸುತ್ತಿದ್ದು , ವಿದ್ಯಾರ್ಥಿಗಳು ಕೂಡಾ ಪರದಾಡುವಂತಾಗಿದೆ.

ರಬಕವಿ ಬನಹಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೇವಲ ಇಬ್ಬರು ಮಾತ್ರ ಖಾಯಂ ಉಪನ್ಯಾಸಕರು ಇದ್ದಾರೆ. ಅವರಲ್ಲಿ ಒಬ್ಬರು ಪ್ರಾಚಾರ್ಯರು. ಇಪ್ಪತ್ತಕ್ಕಿಂತ ಹೆಚ್ಚು ಅತಿಥಿ ಉಪನ್ಯಾಸಕರು ಸೇವೆಯಲ್ಲಿದ್ದಾರೆ. ಅಂದಾಜು 600 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಓದುತ್ತಿದ್ದಾರೆ. ಇವರಲ್ಲಿ ಬಹುತೇಕ ಇಲ್ಲಿಯ ಬಡ ನೇಕಾರರ, ಕೂಲಿಕಾರರ ಮಕ್ಕಳಾಗಿದ್ದಾರೆ.

ನಾಲ್ವತ್ತು ದಿನಗಳಿಂದ ಅತಿಥಿ ಉಪನ್ಯಾಸಕರು ಮುಷ್ಕರದಲ್ಲಿ ತೊಡಗಿದ್ದಾರೆ. ಆರಂಭದಲ್ಲಿ ಕೇವಲ ಹದಿನೈದು ದಿನಗಳ ಕಾಲ ಮಾತ್ರ ವರ್ಗಗಳು ನಡೆದಿದ್ದವು. ಈಗ 1, 3 ಮತ್ತು 5 ನೇ ಸೆಮ್ ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗಿದೆ.

ಬಿ. ಕಾಂ. ವಿದ್ಯಾರ್ಥಿಗಳಿಗೆ ಬಹಳಷ್ಟು ಪ್ರಾಯೋಗಿಕ ವಿಷಯಗಳು ಇದ್ದು , ಜೊತೆಗೆ ಎನ್. ಇ. ಪಿ. ಪಠ್ಯ ಕ್ರಮ ಇರುವುದರಿಂದ ಪಠ್ಯದ ಜೊತೆಗೆ ಅನೇಕ ಪ್ರಾಯೋಗಿಕ ಕಾರ್ಯಗಳಲ್ಲಿ ವಿದ್ಯಾರ್ಥಿಗಳು ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕಾಗಿದೆ. ನಾಲ್ವತ್ತು ಆಂತರಿಕ ಅಂಕಗಳು ಇರುವುದರಿಂದ ನಾವು ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಇನ್ನಿತರ ಕಾರ್ಯಗಳನ್ನು ಮಾಡಬೇಕಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳಿಗೆ ಬಹಳಷ್ಟು ಸಮಸ್ಯೆಯಾಗಲಿದೆ ಎನ್ನುತ್ತಾರೆ ಇಲ್ಲಿಯ ಬಿ.ಕಾಮ್. ವಿದ್ಯಾರ್ಥಿಗಳು.

# ಮಹಿಳೆಯರು ಉನ್ನತ ಶಿಕ್ಷಣ ಹೊಂದಬೇಕು



ರಬಕವಿ–ಬನಹಟ್ಟಿ: ಇಂದಿನ ದಿನಗಳಲ್ಲಿ ಮಹಿಳೆಯರು ಕೂಡಾ ಉನ್ನತ ಶಿಕ್ಷಣ ಪಡೆದುಕೊಂಡರೆ ಅದುವೇ ನಾವು ಸಾವಿತ್ರಿಬಾಯಿ ಪುಲೆ ಅವರಿಗೆ ಸಲ್ಲಿಸಿದ ಗೌರವವಾಗುತ್ತದೆ ಎಂದು ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್ ತಿಳಿಸಿದರು.

ಬುಧವಾರ ಇಲ್ಲಿನ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನಲ್ಲಿ ಸಾವಿತ್ರಿಬಾಯಿ ಪುಲೆ ಜಯಂತ್ಯೋತ್ಸವದ ಅಂಗವಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದ ಮೊದಲ ಶಿಕ್ಷಕಿಯಾಗಿದ್ದ ಸಾವಿತ್ರಿಬಾಯಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ವ ನೀಡಿದರು. ಅವರಿದ್ದ ಕಾಲಘಟ್ಟದ ಸಂದರ್ಭದಲ್ಲಿ ಸಮಾಜದ ವಿರೋಧವನ್ನು ಕಟ್ಟಿಕೊಂಡು ಅವರು ಮುನ್ನಡೆದರು. ವಿದ್ಯಾರ್ಥಿನಿಯರು ಅವರನ್ನು ಆದರ್ಶವನ್ನಾಗಿಟ್ಟುಕೊಂಡು ತಮ್ಮ ಜೀವನದಲ್ಲಿ ಮಹತ್ತರವಾದ ಗುರಿಯನ್ನಿಟ್ಟುಕೊಂಡು ಸಮಾಜದ ಉನ್ನತ ಸ್ಥಾನವನ್ನು ಅಲಂಕರಿಸಬೇಕು ಎಂದು ತಿಳಿಸಿದರು.

ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ರೇಶ್ಮಾ ಗಜಾಕೋಶ ಮಾತನಾಡಿ, ಮಹಿಳೆಯರು ಸಮಾಜದಲ್ಲಿ ಇಂದು ಉನ್ನತ ಸ್ಥಾನಗಳನ್ನು ಅಲಂಕರಿಸುತ್ತಿದ್ದಾರೆ. ಗ್ರಾಮೀಣ ವಿಭಾಗದ ವಿದ್ಯಾರ್ಥಿನಿಯರಿಗೆ ಇಂದಿನ ದಿನಗಳಲ್ಲಿ ಸಾಕಷ್ಟು ಅವಕಾಶಗಳಿವೆ. ಅವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ವೈ. ಬಿ. ಕೊರಡೂರ, ಗೀತಾ ಸಜ್ಜನ, ವಿಶ್ವಜ ಕಾಡದೇವರ, ರತ್ನಾ ಗುಂಡಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬುದ್ಧ ಬಸವ ಅಲ್ಲಮರ ಸಂಗಮ ಶ್ರೀ ಸಿದ್ಧೇಶ್ವರರು



ರಬಕವಿ–ಬನಹಟ್ಟಿ: ಬುದ್ಧ , ಬಸವ, ಅಲ್ಲಮ ಸೇರಿದಂತೆ ವಿಶ್ವದ ಬಹುತೇಕ ತತ್ವಜ್ಞಾನಿಗಳ ಸಂಗಮವಾಗಿದ್ದರು ಸಿದ್ಧೇಶ್ವರ ಸ್ವಾಮೀಜಿ ಎಂದು ರಬಕವಿಯ ಗುರುದೇವ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ಮಂಗಳವಾರ ರಬಕವಿಯ ಬ್ರಹ್ಮಾನಂದ ಆಶ್ರಮದಲ್ಲಿ ಸಿದ್ಧೇಶ್ವರ ಸ್ವಾಮೀಜಿಯವರ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪೂಜ್ಯರನ್ನು , ಸಂತ ಮಹಾಂತರರಿಗೆ ಕೈ ಮುಗಿಯುವುದಕ್ಕಿಂತ ಮುಖ್ಯವಾಗಿ ಅವರ ತತ್ವ ಚಿಂತನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ನಡೆ ನುಡಿಯನ್ನು ಒಂದಾಗಿ ಬಾಳಿದವರು ಸಿದ್ಧೇಶ್ವರರು. ಜಗತ್ತಿಗೆ ಬಾಳಲು ಕಲಿಸಿದವರು ಸಿದ್ಧೇಶ್ವರ ಸ್ವಾಮೀಜಿ ಎಂದು ಗುರುಸಿದ್ಧೇಶ್ವರ ಸ್ವಾಮೀಜಿ ತಿಳಿಸಿದರು.

ನಿವೃತ್ತ ಉಪನ್ಯಾಸಕ ಪ್ರೊ. ಎಂ. ಎಸ್. ಬದಾಮಿ ಮಾತನಾಡಿ, ತತ್ವಜ್ಞಾನ ಮತ್ತು ಆಧ್ಯಾತ್ಮವನ್ನು ಜನರಿಗೆ ಸುಲಭವಾಗಿ ತಿಳಿಸಿದವರು ಸಿದ್ಧೇಶ್ವರ ಸ್ವಾಮೀಜಿಗಳು. ನಮ್ಮಲ್ಲಿರುವ ಅಭಿಮಾನವನ್ನು ಹೆಚ್ಚಿಸಿದವರು ಸಿದ್ಧೇಶ್ವರ ಸ್ವಾಮೀಜಿ. ಕಠಿಣವಾದ ಸಂದೇಶಗಳನ್ನು ಮೃದು ಮಾತುಗಳಲ್ಲಿ ಹೇಳುವುದರ ಮೂಲಕ ಜನರಿಗೆ ಮಾರ್ಗದರ್ಶನ ನೀಡಿದರು ಎಂದು ತಿಳಿಸಿದರು.

ಮಹಾದೇವ ಕವಿಶೆಟ್ಟಿ ಮಾತನಾಡಿದರು.

ವಿರೂಪಾಕ್ಷಪ್ಪ ಹಿರೇಮಠ, ಬುದ್ದಪ್ಪ ಕುಂದಗೋಳ, ರಾಮಣ್ಣ ಕುಲಗೋಡ, ಮುರಿಗೆಪ್ಪ ಮಿರ್ಜಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸಮಾಜ ಸುಧಾರಕಿ ಸಾವಿತ್ರಿ ಬಾಯಿ ಫುಲೆ: ಶ್ರೀಮತಿ ಎಲ್.ಬಿ ದೇಸಾಯಿ




ತಿಕೋಟಾ : 19 ನೇ ಶತಮಾನದ ಭಾರತದ ಪ್ರಸಿದ್ಧ ಸಮಾಜ ಸುಧಾರಕಿ, ಕವಿ, ಶಿಕ್ಷಣ ಪ್ರೇಮಿ, ಅಕ್ಷರದವ, ಮತ್ತು ಸಾಮಾಜಿಕ ಸುಧಾರಣೆಗೆ ಶ್ರಮಿಸಿದ ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಎಂದು ಮಹಿಳಾ ಘಟಕದ ಮುಖ್ಯಸ್ಥೆ ಶ್ರೀಮತಿ ಎಲ್.ಬಿ.ದೇಸಾಯಿ ಹೇಳಿದರು.

ಪಟಣ್ಣದ ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಯ್.ಕ್ಯೂ.ಎ.ಸಿ, ಎನ್ ಎಸ್ ಎಸ್, ವ್ಹಾ ಆರ್ ಸಿ, ಸಾಂಸ್ಕೃತಿ ಘಟಕ, ಮಹಿಳಾ ಘಟಕದ ಸಹಯೋಗದಲ್ಲಿ ದಿನಾಂಕ 3 –1– 2024 ರಂದು ಬೆಳಿಗ್ಗೆ 12–30 ಕ್ಕೆ ಮಹಾವಿದ್ಯಾಲಯದ ರೊ ನಂ 4 ರಲ್ಲಿ ಸಾವಿತ್ರಿ ಬಾಯಿ ಫುಲೆ ಅವರ 193 ನೇ ಜನ್ಮ ದಿನಾಚಾರಣೆ ಅಂಗವಾಗಿ ಮಹಿಳಾ ಘಟಕದ ಮುಖ್ಯಸ್ಥೆ ಶ್ರೀಮತಿ ಎಲ್.ಬಿ ದೇಸಾಯಿ ಕಾರ್ಯಕ್ರಮ ಚಾಲನೆ ಗೊಳಿಸಿ ಮಾತನಾಡಿದ ಅವರು ಈ ದೇಶದ ಹಿಂದುಳಿದ ದಲಿತ, ಶೂದ್ರ ಜನಾಂಗಕ್ಕೆ ವಿದ್ಯೆಯನ್ನು ಪಡೆಯಲೇಬಾರದು ಎನ್ನೂವ ಪೇಲ್ವರ್ಗದ ಅಲಿಖಿತ ನಿಯಮದ ವಿರುದ್ಧ ಸಮಾಜದ ಕಟ್ಟುಪಾಡು, ಅನಿಷ್ಠ ಪದ್ಧತಿಗಳಾದ ಜಾತಿ ಪದ್ದತಿ, ಲಿಂಗ ಅಸಮಾನತೆ, ಸತಿಸಹಗಮನ, ಬ್ರಾಹಣರ ವಿದವೇಯರ ಕೇಶಮಂಡನೆಯಂತಹ ಅನಿಷ್ಟ ಪದ್ಧತಿಗಳ ವಿರುದ್ಧದ ಹೋರಾಟದ ಸಮಯದಲ್ಲಿ ಮೇಲ್ವರ್ಗ ಜನಾಂಗದ ಯಾವುದೇ ದಬ್ಬಾಳಿಕೆಗೆ ಅಂಜದೇ ಅಳುಕದೇ ಅನೇಕ ಅವಮಾನ, ಪೆಟ್ಟುಗಳ ಮಧ್ಯಯೂ ಸಿಡಿದೆದ್ದ ದೀಮಂತ ಮಹಿಳೆ ಭಾರತದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿಬಾಯಿ ಫುಲೆ, ಅಕ್ಷರದವ್ವ, ಆದರ್ಶ ಪ್ರಾಯ ಮಹಿಳೆ, ಸಾವಿತ್ರಿಬಾಯಿ ಫುಲೆ ಅವರು 1831 ರಲ್ಲಿ ಮಹಾರಾಷ್ಟ್ರದ ಸತಾರ ಜಿಲ್ಲೆಯ ನೈಗಾಂನ್ ನಲ್ಲಿ ಹುಟ್ಟಿದರು. 8 ವರ್ಷ ಇರುವಾಗಲೇ ಜ್ಯೋತಿಭಾ ಫುಲೆ ಅವರನ್ನು ಬಾಲ್ಯ ವಿವಾಹ ಆಗುತ್ತಾರೆ. ಮನೆಯೇ ಮೊದಲ ಪಾಠ ಶಾಲೆ, ಪತಿ ಜ್ಯೋತಿಬಾ ಅವರೆ ಗುರುಗಳಾಗಿದ್ದರು. 1847 ರಲ್ಲಿ ಸಾವಿತ್ರಿಬಾಯಿ ಫುಲೆ ಶ್ರೀಮತಿ ಮಿಚಲ್ ಅವರ ನಾರ್ಮಲ್ ಶಾಲೆಯಲ್ಲಿ ಶಿಕ್ಷಕಿಯ ತರಬೇತಿ ಪಡೆದುಕೊಂಡರು. ಶ್ರೀ ಭಿಡೆಯವರ ಮನೆಯಲ್ಲಿ ಆರಂಭಗೊಂಡ ಕನ್ಯಾಸಾಲೆಯ ಪ್ರಧಾನ ಶಿಕ್ಷಕಿಯಾದರು. ಆ ಕಾಲದಲ್ಲಿ ಸ್ತ್ರಿಯೊಬ್ಬಳ ಶಿಕ್ಷಕಿಯಾಗುವದು ಧರ್ಮಕ್ಕು, ಸಮಾಜಕ್ಕು ದ್ರೋಹ ಬಗೆದಂತೆ, ಎಂದು ಬಾವಿಸಿದ್ದ ಜನ ಅವರನ್ನು ಪಾಠಶಾಲೆಗೆ ಹೋರಟಾಗ ಕೆಲವರು ಕೇಕೆ ಹಾಕಿ ನಗುತ್ತಿದ್ದರು. ಅವರ ಮೇಲೆ ಸಗಣಿ ಎರಚಿ, ಕಲ್ಲುಗಳನ್ನು ತೊರುತ್ತಿದ್ದರು. ಸಾವಿತ್ರಿ ಬಾಯಿ ಅವರು ತೊರುತ್ತಿದ್ದ ಕಲ್ಲು, ಸಗಣಿಗಳನ್ನು “ಹೂ ಗಳೆಂದು ಪರಿಭಾವಿಸಿ”, ಶಾಲೆಯಲ್ಲಿ ಸಿರಿ ಬದಲಾಯಿಸಿ ಮಕ್ಕಳಿಗೆ ಪಾಠ ಹೇಳುತ್ತಿದ್ದರು.ಬ್ರಿಟಿಷ ಸರ್ಕಾರವು ಈ ದಂಪತಿಗಳ ಕೆಲಸ ಕಾರ್ಯಗಳನ್ನು ಕುಲಂಕುಷವಾಗಿ ಅವಲೋಕಿಸಿ “ಇಂಡಿಯಾಸ್ ಫಸ್ಟ ಲೇಡಿ ಟೀಚರ್” ಎಂದು ಗೌರವಿತ್ತು ಎಂದು ಹೇಳಿದರು.

ಪ್ರಾಚಾರ್ಯ ಆರ್ ಬಿ ಸಿರಸಂಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಬಸವರಾಜ ಸಾಲವಾಡಗಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಅಸ್ಲಂ ಮುಲ್ಲಾ ಸ್ವಾಗತಿಸಿ ವಂದಿಸಿದರು.

ಮಹಾವಿದ್ಯಾಲಯದ ಎಲ್ಲಾ ಬೋಧಕ ಬೋಧಕೇರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

